International Journal of Kannada Research
www.kannadajournal.com

ISSN: 2454–5813
IJKR 2021; 7(1): 07-13
© 2021 IJKR
www.kannadajournal.com
Received: 05-11-2020
Accepted: 08-12-2020

**ಡಾ. ಎನ್.ಆರ್.ಚಂದ್ರೇಗೌಡ**
ಸಹಾಯಕ ಪ್ರಾಧ್ಯಾಪಕರು,
ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ,
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು,
ಕರ್ನಾಟಕ, ಭಾರತ

**Corresponding Author:**
**ಡಾ. ಎನ್.ಆರ್.ಚಂದ್ರೇಗೌಡ**
ಸಹಾಯಕ ಪ್ರಾಧ್ಯಾಪಕರು,
ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ,
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು,
ಕರ್ನಾಟಕ, ಭಾರತ

# ಸ್ವಾಮಿ ವಿವೇಕಾನಂದ ಮತ್ತು ಕುವೆಂಪು ಅವರ ಸಾಮಾಜಿಕ ದೃಷ್ಟಿಕೋನ

**ಡಾ. ಎನ್.ಆರ್.ಚಂದ್ರೇಗೌಡ**

ಜಗತ್ತು ಕಂಡ ಮಹಾನ್ ವ್ಯಕ್ತಿಗಳಲ್ಲಿ ಸ್ವಾಮಿ ವಿವೇಕಾನಂದ ಮತ್ತು ಕುವೆಂಪು ಅವರು ಅತ್ಯಂತ ಪ್ರಮುಖರು. ವಿಶ್ವದಲ್ಲಿಯೇ ಅತ್ಯಂತ ಶೇಷ್ಠವಾದ ಧರ್ಮ ಮತ್ತು ಸಂಸ್ಕೃತಿ ಭಾರತದಲ್ಲಿದೆ ಎಂದು ಪ್ರಪಂಚಕ್ಕೆ ಸಾರಿದ ಶ್ರೇಷ್ಠ ಆಧ್ಯಾತ್ಮಿಕ ಚಿಂತಕ, ದಾರ್ಶನಿಕ, ಸಂತ ಎಂದರೆ ಸ್ವಾಮಿ ವಿವೇಕಾನಂದರು. 1893 ಸೆಪ್ಟಂಬರ್ 11 ರಂದು ಶಿಕಾಗೋದಲ್ಲಿ ನಡೆದ ಸರ್ವಧರ್ಮಸಮ್ಮೇಳನದಲ್ಲಿ ತಮ್ಮ ಕಂಚಿನ ಕಂಠದ ಮೂಲಕ Ladies and gentleman ಎಂದು ಪ್ರಾರಂಭಿಸುವುದರ ಬದಲಾಗಿ ಅತ್ಯಂತ ಆತ್ಮೀಯತೆಯಿಂದ sisters and Brothers ಎಂದು, ಅಂದರೆ ಅಮೆರಿಕಾದ ನನ್ನ ಪ್ರೀತಿಯ ಸಹೋದರಿ, ಸಹೋದರರೇ......... ಎಂದು ಭ್ರಾತೃತ್ವದಿಂದ ಉದ್ಗರಿಸಿ ತಮ್ಮ ಭಾಷಣವನ್ನು ಪ್ರಾರಂಭಿಸಿ, ಇಡೀ ಸಭಾಸದರನ್ನು ತನ್ನತ್ತ ಸೆಳೆಯುವಂತೆ ಮಾಡಿದವರು. ವಿವೇಕಾನಂದರು ಆ ಒಂದು ದಿನದಲ್ಲೇ ವಿಶ್ವನಾಯಕರಾದರು. ಹಾಗೆಯೇ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಸಾಹಿತ್ಯ ಕೃಷಿ ಮಾಡಿ ಅತ್ಯಂತ ಮೌಲಿಕವಾದ ಕೃತಿಗಳನ್ನು ರಚಿಸಿ, ಜಗತ್ತಿನ ಸಾಹಿತ್ಯ ಪರಂಪರೆಯೇ ಬೆರಗುಗೊಳ್ಳುವ ರೀತಿಯಲ್ಲಿ ವೈಚಾರಿಕ ಹಾಗೂ ವೈಜ್ಞಾನಿಕ ನೆಲೆಗಟ್ಟಿನಲ್ಲಿ ಸಾಮಾಜಿಕವಾಗಿ ವಿಶ್ವಸಂದೇಶವನ್ನು ಸಾರಿದವರು ವಿಶ್ವಕವಿ ಕುವೆಂಪು. 'ಗಂಗೋತ್ರಿ' ಎಂಬ ಕುವೆಂಪು ಅವರ ಅಭಿನಂದನಾ ಗ್ರಂಥದಲ್ಲಿ ಬೇಂದ್ರೆ 'ಯುಗದ ಕವಿಗೆ' ಕವನದ ಮೂಲಕ ಅಭಿನಂದಿಸಿದ್ದಾರೆ : "ಯುಗದ ಕವಿಗೆ ಜಗದ ಕವಿಗೆ ಶ್ರೀರಾಮಾಯಣ ದರ್ಶನದಿಂದಲೇ ಕೈ ಮುಗಿದ ಕವಿಗೆ– ಮಣಿಯದವರು ಯಾರು ? ರಾಮಕೃಷ್ಣ ವಚನೋದಿತ ಪ್ರತಿಭೆ ತೆರೆದ ಕವನ ತತಿಗೆ ತಣಿಯದವರು ಯಾರು? ..............." ಎಂದು ಕುವೆಂಪು ಅವರ ಸಮಕಾಲೀನರು ಜ್ಞಾನಪೀಠ ಪ್ರಶಸ್ತಿ ವಿಜೇತರು ಆದ ಬೇಂದ್ರೆ ಅವರು 'ಯುಗದ ಕವಿ ಜಗದ ಕವಿ' ಎಂದು ಅಭಿನಂದಿಸಿರುವುದು ನಿಜಕ್ಕೂ ಕುವೆಂಪು ಅವರಿಗೆ ಸಂದ ಗೌರವ. 'ಕುವೆಂಪು ಮಹಾಕವಿ ಮಾತ್ರವಲ್ಲ; ಮಹಾಸಂತರೂ ಹೌದು. ಇವರಿಬ್ಬರೂ ಭಾವಕೋಶ ಮತ್ತು ವಿಶ್ವಕೋಶವಾಗಿದ್ದರು. ಒಬ್ಬರು ಆಧ್ಯಾತ್ಮಿಕ ತಪಸ್ವಿಯಾದರೆ ಮತ್ತೊಬ್ಬರು ಸಾಹಿತ್ಯ ತಪಸ್ವಿಗಳಾಗಿದ್ದರು. ಇಂತಹ ಮೇರು ವ್ಯಕ್ತಿಗಳ ಆಧ್ಯಾತ್ಮಿಕ ಮತ್ತು ಸಾಹಿತ್ಯಿಕ ಸಂದೇಶ ಸಾರ್ವಕಾಲೀನ ಸಾಮಾಜಿಕ ಮೌಲ್ಯಪ್ರಜ್ಞೆ ವಿಶ್ವಕ್ಕೆ ಮಾದರಿ ಹಾಗೂ ಮಾರ್ಗದರ್ಶಕವಾಗಿವೆ.

ಸ್ವಾಮಿ ವಿವೇಕಾನಂದರು 1863 ರಿಂದ 1902 ರವರೆಗೆ ಬದುಕಿದ್ದ ಕಾಲಘಟ್ಟ. ಈ ಅವಧಿಯಲ್ಲಿ ನಮ್ಮ ದೇಶ ಅತ್ಯಂತ ಸಂದಿಗ್ದತೆಯಿಂದ ಕೂಡಿದ್ದು ಬ್ರಿಟಿಷರ ಆಡಳಿತದಿಂದ ಅರಾಜಕತೆ, ಅಸಹಾಯಕತೆಗೆ ತುತ್ತಾಗಿತ್ತು. ಇಂತಹ ಸಂದರ್ಭದಲ್ಲಿ ತಮ್ಮ ಜೀವನದ ಅಲ್ಪ ಕಾಲದಲ್ಲಿ ದೇಶಕ್ಕೋಸ್ಕರ ಮಾಡಿದ ಸೇವೆ ಮತ್ತು ತ್ಯಾಗ ಅನನ್ಯವಾದುದು. ದೇಶದ ಸ್ವಾತಂತ್ರ್ಯ ಮತ್ತು ಏಳಿಗೆಗೋಸ್ಕರ ಸತ್ಯಾಗ್ರಹ ಮತ್ತು ಕ್ರಾಂತಿಯ ವಿಚಾರಧಾರೆಗಳನ್ನು ದೇಶದೆಲ್ಲೆಡೆ ಪ್ರಚಾರ ಮಾಡಿ ಒಗ್ಗೂಡಿಸುವುದಕ್ಕೆ ಪ್ರೇರಕರಾಗಿದ್ದರು. ಹಾಗೆಯೇ ಕುವೆಂಪು ಅವರು ವಿವೇಕಾನಂದರ ನಂತರ 1904 ರಿಂದ 1994 ರವರೆಗೆ ಬದುಕಿದ್ದ ಕಾಲಮಾನ. ಇವರು ದೇಶದ ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯೋತ್ತರದಲ್ಲಿ ಕಂಡುಂಡಂತಹ ಸ್ಥಿತ್ಯಂತರಗಳನ್ನು ತಮ್ಮ ಬರೆಹದಲ್ಲಿ ವ್ಯಕ್ತಪಡಿಸಿ, ಜನಮಾನಸದಲ್ಲಿ ದೇಶಪ್ರೇಮ, ವಿಶ್ವಮಾನವತ್ವ ಪ್ರಜ್ಞೆಯನ್ನು ಸಾಮಾಜಿಕ ನೆಲೆಗಟ್ಟಿನಲ್ಲಿ ಬಿತ್ತರಿಸಿ ಸಂಚಲನವನ್ನುಂಟು ಮಾಡಿದವರು.

ಬ್ರಿಟೀಷರ ಆಡಳಿತದಿಂದ ಅವರ ವ್ಯವಹಾರದ ದೃಷ್ಟಿಯಿಂದ ನಮ್ಮ ದೇಶದ ವಿವಿಧ ರಾಜ್ಯ, ಭಾಷೆ, ಸಂಸ್ಕೃತಿ, ಪರಂಪರೆ ಛಿದ್ರಛಿದ್ರವಾಗಿತ್ತು. ಇಂತಹ ಸಂದರ್ಭದಲ್ಲಿ ವಿವೇಕಾನಂದ ಮತ್ತು ಕುವೆಂಪು ಅವರು ಕೈಗೊಂಡ ನಿಲುವುಗಳು ಅತ್ಯಂತ ಪ್ರಮುಖವಾದವು. ನಮ್ಮ ದೇಶ ಎಂತಹ ಹೀನ ಸ್ಥಿತಿಗೆ ಬಂದಿತ್ತೆಂದರೆ 560ಕ್ಕೂ ಹೆಚ್ಚು ನಮ್ಮ ದೇಶದಲ್ಲಿ ರಾಜರುಗಳು, ಸಾಮಂತರು,

ಪಾಳೇಗಾರರು ಇದ್ದರೂ ಕೂಡ ಬ್ರಿಟೀಷರು ನಮ್ಮ ದೇಶವನ್ನು ಸಂಪೂರ್ಣವಾಗಿ ಆವರಿಸಿಕೊಂಡಿದ್ದರು. ನಮ್ಮ ರಾಜಮಹಾರಾಜರಿಗೆ ಭೂಮಿ, ಪ್ರಜೆಗಳು, ಸೈನ್ಯ, ಹಣ-ಇವೆಲ್ಲಾ ಇದ್ದರೂ ಬ್ರಿಟೀಷರ ಆಡಳಿತದ ಮುಂದೆ ಅವರು ತಲೆತಗ್ಗಿಸಬೇಕಾಗಿತ್ತು. ನಮ್ಮ ದೇಶದಲ್ಲಿ ಅತ್ಯಂತ ಶ್ರೇಷ್ಠವಾದ ಧರ್ಮ, ಸಂಸ್ಕೃತಿ, ಪರಂಪರೆ, ಸಾಹಿತ್ಯ ಎಲ್ಲಾ ಇದ್ದರೂ ಯಾವುದಕ್ಕೂ ಯೋಗ್ಯತೆಯಿಲ್ಲದ್ದು ಎನ್ನುವಂತೆ ಕಡೆಗಣಿಸಿದ್ದರು. ಎಲ್ಲಕ್ಕಿಂತಲೂ ಸರ್ವಶ್ರೇಷ್ಠವಾದುದು ಎಂದರೆ ಯೂರೋಪ್ ದೇಶದ್ದು ಎಂದು ನಮಗೆ ಹೇರಿದ್ದರು. ಬ್ರಿಟೀಷರ ಸಂಸ್ಕೃತಿ, ಶಿಕ್ಷಣ, ನಾಗರಿಕತೆ, ರೀತಿರಿವಾಜುಗಳೇ ಶ್ರೇಷ್ಠವೆಂದೇ ಪ್ರತಿಪಾದಿಸುತ್ತಿದ್ದರು. ಯೂರೋಪಿನ ಸಂಸ್ಕೃತಿಯನ್ನು ಪಾಲಿಸಿದರೆ ನೀವು ಉದ್ಧಾರವಾಗುತ್ತೀರಾ ಇಲ್ಲವಾದರೆ ಇಲ್ಲವೆಂದು ಭಾರತದ ಬಗ್ಗೆ ಅತ್ಯಂತ ಕೆಟ್ಟ ಅಭಿಪ್ರಾಯವನ್ನಿಟ್ಟುಕೊಂಡಿದ್ದರು. ಅವರಲ್ಲಿ ಇಂಗ್ಲೇಂಡ್‌ನ ನೋಬೆಲ್ ಪ್ರಶಸ್ತಿ ವಿಜೇತ ಕವಿ Rudyard kipling ಅವರ 'The Ballad of East and west' ಎನ್ನುವ ಕವನದಲ್ಲಿ oh, East is East and West is west, and never the twain shall meet. ಪೂರ್ವಪೂರ್ವವೇ-ಪಶ್ಚಿಮ ಪಶ್ಚಿಮವೇ ಇವೆರಡು ಎಂದೂ ಕೂಡ ಒಟ್ಟಿಗೆ ಸೇರುವುದಕ್ಕೆ ಸಾಧ್ಯವಿಲ್ಲ ಎನ್ನುತ್ತಾರೆ. East ನಲ್ಲಿರುವವರು ಅತ್ಯಂತ ಕೆಳಮಟ್ಟದಲ್ಲಿರುವವರು, West ನವರ ಮಟ್ಟಕ್ಕೆ ಬರುವುದಕ್ಕೆ ಸಾಧ್ಯವೇ ಇಲ್ಲ. ಆತನೆ ಬರೆದ ಮತ್ತೊಂದು 'White man's burden' ಕವನದಲ್ಲಿ ಬಿಳಿಚರ್ಮದ ಜನರ ಹೆಗಲ ಮೇಲಿರುವಂತಹ ಭಗವಂತ ಕೊಟ್ಟಿರುವ ಒಂದು ಭಾಗ. ಕೊಳಚೆ ಪ್ರದೇಶದಲ್ಲಿ ವಾಸ ಮಾಡುವಂತಹ ಭಾರತದ ಜನರನ್ನು ಉದ್ಧಾರ ಮಾಡುವುದಕ್ಕೆ ಭಗವಂತ ಕೊಟ್ಟಿರುವ ಜವಾಬ್ದಾರಿ ಎಂದು ಬರೆದಿದ್ದಾನೆ. ಇಂತಹ ದೇಶದ ದುಸ್ಥಿತಿಯ ಸಂದರ್ಭದಲ್ಲಿ ವಿವೇಕಾನಂದರು ಜನ್ಮತಾಳುತ್ತಾರೆ. ವಿವೇಕಾನಂದರು ಸನ್ಯಾಸಿಯಾದರೂ ಕೂಡ ಅವರಲ್ಲಿದ್ದ ತುಡಿತ ಭಾರತವನ್ನು ಹೇಗೆ ಮೇಲಕ್ಕೆತ್ತುವುದು. ಇಷ್ಟು ದಯಾನೀಯ ಸ್ಥಿತಿಯಲ್ಲಿರುವ ಜನರನ್ನು ಜಾಗೃತಿ ಮೂಡಿಸಿ ಭವ್ಯಭಾರತವನ್ನಾಗಿ ಮಾಡಬೇಕಾದರೆ ಏನು ಮಾಡಬೇಕು ಎಂದು ಚಿಂತಿಸಿ ಆಧ್ಯಾತ್ಮಿಕ ಮಾರ್ಗವನ್ನನುಸರಿಸುತ್ತಾರೆ.

ಶ್ರೀರಾಮಕೃಷ್ಣ ಪರಮಹಂಸರು ಪರಮಶಿಷ್ಯರಾದ ವಿವೇಕಾನಂದರನ್ನು ತುಂಬಾ ಇಷ್ಟಪಡುತ್ತಿದ್ದರು. ಅವರ ಬಗ್ಗೆ ಅಪಾರವಾದ ಪ್ರೀತಿ ವಿಶ್ವಾಸವಿತ್ತು. 'ಇವರ ಭಕ್ತರು ನಕ್ಷತ್ರದಂತಿದ್ದರೆ ನರೇಂದ್ರ ಸೂರ್ಯನಂತೆ' ಎನ್ನುತ್ತಿದ್ದರು. 'ನರೇಂದ್ರ ಮುಕ್ತ, ಇತರರ ಉದ್ಧಾರಕ್ಕಾಗಿ ಜನ್ಮತಾಳಿರುವನು' ಎಂದು ನಂಬಿಕೆಯಿತ್ತು. ನರೇಂದ್ರನಿಗೆ ಗುರುಗಳ ಬಗ್ಗೆ ಗಾಢಪ್ರೇಮ ಬೆಳೆದು ದಕ್ಷಿಣೇಶ್ವರದಲ್ಲಿದ್ದ ಶ್ರೀರಾಮಕೃಷ್ಣ ಪರಮಹಂಸರನ್ನು ನಿರಂತರ ಸಂಪರ್ಕವಿಟ್ಟುಕೊಂಡಿದ್ದರು. ಕಾಲಕಳೆದಂತೆ ನರೇಂದ್ರನಿಗೆ ಶ್ರೀರಾಮಕೃಷ್ಣರಲ್ಲಿ ಹೆಚ್ಚು ಹೆಚ್ಚು ನಿಷ್ಠೆ ಬೆಳೆಯಿತು. ಗುರುಗಳು ಶಿಷ್ಯನಿಗೆ ಅನೇಕ ಉಪದೇಶಗಳನ್ನು ಧ್ಯಾನಮಾಡುವುದನ್ನು ಹೇಳಿಕೊಟ್ಟರು. ಅನಂತರ ಕ್ರಮೇಣ ಧ್ಯಾನ ಮತ್ತು ಇತರ ಆಧ್ಯಾತ್ಮಿಕ ಸಾಧನೆಗಳಲ್ಲಿ ಹೆಚ್ಚು ಹೆಚ್ಚು ಆಸಕ್ತನಾದನು. ಇವುಗಳ ನಡುವೆ 1884ರಲ್ಲಿ ತಂದೆಯ ಮರಣ ಮತ್ತು 1886ರಲ್ಲಿ ಗುರುಗಳ ಮರಣದಿಂದ ಅತ್ಯಂತ ಸಂಕಷ್ಟದ ದಿನಗಳನ್ನು ಎದುರಿಸಿದರು. ಇವೆಲ್ಲವನ್ನೂ ಮೆಟ್ಟಿನಿಂತು ಭವ್ಯಭಾರತದ ಏಳಿಗೆಗೋಸ್ಕರ ನಿರಂತರವಾಗಿ ಪರ್ಯಟನೆ ಮಾಡಿದರು. ರಾಜಮಹಾರಾಜರನ್ನು, ಮಠಗಳನ್ನು, ಸ್ವಾಮೀಜಿಗಳನ್ನು, ದೇವಾಲಯಗಳನ್ನು ಭೇಟಿ ಮಾಡಿದರು. ದೇಶದಾದ್ಯಂತ ಪ್ರಯಾಣ ಮಾಡಬೇಕಾದರೆ ಕೆಲವು ವೇಳೆ ಅವರಿಗೆ ತಿನ್ನಲು ಏನೂ ಸಿಗುತ್ತಿರಲಿಲ್ಲ, ಸುಸ್ತಾಗಿ ಹಸಿವಿನಿಂದ ಇರುತ್ತಿದ್ದರು. ಆ ಸಂದರ್ಭದಲ್ಲಿ ಉದಾರಹೃದಯಿಗಳಾದ ಬಡವರು ಮತ್ತು ದೀನರು ನನಗೆ ಊಟ ಮತ್ತು ಇರಲು ಸ್ಥಳ ಕೊಟ್ಟು ಸಹಾಯ ಮಾಡುತ್ತಿದ್ದರು. ಇಂತಹ ಮಾನವೀಯ ಅಂತಃಕರಣವುಳ್ಳ ದೀನದಲಿತರನ್ನು ಮೇಲಕ್ಕೆ ತರಬೇಕೆಂಬ ತುಡಿತ ವಿವೇಕಾನಂದರ ಮನಸ್ಸಿನಲ್ಲಿ ಹಾತೊರೆಯುತ್ತಿತ್ತು.

ವಿವೇಕಾನಂದರು ದೇಶದಾದ್ಯಂತ ಪರ್ಯಟನೆ ಮಾಡಬೇಕಾದರೆ ಮಹಾರಾಷ್ಟ್ರದ ಪುಣೆಯಿಂದ ಕನ್ನಡನಾಡಿನ ಬೆಳಗಾವಿಗೆ ಭೇಟಿ ನೀಡಿ, ಹತ್ತು ದಿನಗಳವರೆಗೆ ಇದ್ದರು. ಆ ಸಂದರ್ಭದಲ್ಲಿ ದಿನಪತ್ರಿಕೆಯೊಂದರಲ್ಲಿ ಕಲ್ಕತ್ತಾ ನಗರದ ಒಬ್ಬ ವ್ಯಕ್ತಿ ಹೊಟ್ಟೆಗಿಲ್ಲದೆ ಹಸಿವಿನಿಂದ ತತ್ತರಿಸಿ ಸತ್ತನೆಂಬ ಸುದ್ದಿಯನ್ನು ಓದಿ ಎದೆ ಹಿಂಡಿದಂತಾಗಿ 'ಅಯ್ಯೋ ನನ್ನ ದೇಶವೇ ! ಅಯ್ಯೋ ನನ್ನ ದೇಶವೇ ! ಎಂದು ನರಳಿದರಂತೆ. ಬಡವರು, ನಿರ್ಗತಿಕರು ಕೆಳವರ್ಗವರ ಬಗ್ಗೆ ಸ್ವಾಮೀಜಿಗಳು ಸಂವೇದನಾಶೀಲತೆಯಿಂದ ಹೃದಯಸ್ಪರ್ಶಿ ಸ್ಪಂದಿಸುತ್ತಿದ್ದರು. ಸ್ವಾಮೀಜಿಯವರು ಇಂತಹ ಭಾರತದ ಜನರಿಗಾಗಿ ಮರುಗಿದರು. ಅವರಿಗಾಗಿ ಏನಾದರೂ ಮಾಡಬೇಕೆಂದು ಕಾತರರಾಗಿದ್ದರು. ರಾಜರು, ವಿದ್ಯಾವಂತರು, ಯುವಕರು ಇವರೆಲ್ಲರನ್ನೂ ಜಾಗೃತಗೊಳಿಸಲು ಪ್ರಯತ್ನಿಸಿದರು. ಅವರು ಕೊಟ್ಟಂತಹ ಸಂದೇಶ ಮಾನವೀಯತೆಯ ಸಮಾಜಮುಖಿ ನಿಲುವಾಗಿತ್ತು. ನಮ್ಮೆಲ್ಲರ ಆರಾಧ್ಯದೈವ ದರಿದ್ರದೇವೋಭವ, ಮೂರ್ಖದೇವೋಭವವಾಗಬೇಕು. ನಮ್ಮೆಲ್ಲರ ಆರಾಧ್ಯದೈವ ಒಬ್ಬ ದರಿದ್ರ ಆಗಲಿ, ಒಬ್ಬ ಮೂರ್ಖ ಆಗಲಿ ಅವರೆಲ್ಲರನ್ನೂ ನಾವು ದೇವರ ಹಾಗೆ ಕಾಣಬೇಕು ಎಂದು ಉಪದೇಶ ನೀಡಿದ್ದರು.

ಕುವೆಂಪು ಅವರು ಪ್ರೌಢಶಿಕ್ಷಣದಿಂದ ಸ್ನಾತಕೋತ್ತರ ಪದವಿ ವ್ಯಾಸಂಗವನ್ನು ಮೈಸೂರಿನಲ್ಲಿಯೇ ಪಡೆಯುವಾಗ ರಾಮಕೃಷ್ಣ ಆಶ್ರಮದ ಒಡನಾಟವನ್ನಿಟ್ಟುಕೊಂಡಿದ್ದು ಅವರ ಜೀವನದಲ್ಲಿ ಅತ್ಯಂತ ಮಹತ್ವಪೂರ್ಣವಾದ ತಿರುವು ಪಡೆಯಿತು. ಮೈಸೂರಿನ ಪ್ರಸ್ತುತ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಮಹಾರಾಣಿ ಶಾಲೆಗೆ ಹೊಂದಿಕೊಂಡಿರುವ ಆಶ್ರಮವೇ ಆ ದಿನಗಳಲ್ಲಿ ರಾಮಕೃಷ್ಣ ಆಶ್ರಮವಾಗಿತ್ತು. ಸಂತೆಪೇಟೆಯಲ್ಲಿ ರೂಮ್‌ವೊಂದನ್ನು ಮಾಡಿಕೊಂಡು ಈ ಆಶ್ರಮದ ಮಾರ್ಗವಾಗಿ ಕಾಲೇಜಿಗೆ ಹೋಗುತ್ತಿದ್ದುದುಂಟು. ರಾಮಕೃಷ್ಣ ಮತ್ತು ವಿವೇಕಾನಂದರ ಬಗ್ಗೆ ಅಲ್ಪಸ್ವಲ್ಪ ತಿಳಿದಿದ್ದ ಕುವೆಂಪುರವರು ಪ್ರತಿಭಾವಂತರಾಗಿದ್ದರಿಂದ ಆಗಾಗ ಕವನಗಳನ್ನು ಬರೆದದ್ದು ವಿವಿಧ ಪತ್ರಿಕೆ ಹಾಗೂ ಸಂಚಿಕೆಗಳಲ್ಲಿ ಪ್ರಕಟವಾಗುತ್ತಿದ್ದವು. ಇವರ ಪ್ರತಿಭೆಯನ್ನು ಮನಗಂಡ ಆಶ್ರಮದ ಶ್ರೀಸಿದ್ದೇಶ್ವರಾನಂದ ಸ್ವಾಮೀಜಿಯವರು ಕುವೆಂಪು ಅವರ ಜೊತೆ ನಿಕಟವಾದ ಸಂಪರ್ಕವನ್ನು ನಿರಂತರವಾಗಿ ಇಟ್ಟುಕೊಂಡರು. ಅಲ್ಲಿಂದ ಕುವೆಂಪು- ವಿವೇಕಾನಂದರ ದೇಶಾಭಿಮಾನದ ಮತ್ತು ಆಧ್ಯಾತ್ಮಿಕ ಅನಂತ ಶಕ್ತಿಯನ್ನು ತಿಳಿದು, ಅಧ್ಯಯನ ಮಾಡಿ ಗರ್ಭೀಕರಿಸಿಕೊಂಡರು. 1946 ರಲ್ಲಿ ಪ್ರಕಟವಾದ ಕುವೆಂಪು ಅವರ 'ಅಗ್ನಿಹಂಸ' ಕವನ ಸಂಕಲನದಲ್ಲಿ ಶ್ರೀ ಸಿದ್ದೇಶ್ವರಾನಂದರು ಶ್ರೀ ರಾಮಕೃಷ್ಣ ಪರಮಹಂಸರು ಮತ್ತು ಸ್ವಾಮಿ ವಿವೇಕಾನಂದರನ್ನು ಕುರಿತು ಕವನವನ್ನು ರಚಿಸಿರುವುದು ಪ್ರಕಟವಾಗಿದೆ :

> ಶ್ರೀ ವಿವೇಕಾನಂದ ಗುರುವರ, ನವಯುಗಾಚಾರ್ಯ,
> ರಾಮಕೃಷ್ಣರ ಭೀಮಶಿಷ್ಯನೆ, ವೀರವೇದಾಂತಿ,
> ಭಾರತಾಂಬೆಯ ಧೀರಪುತ್ರನೆ, ಸಾದುಭೈರವನೆ,
> ಸ್ಥೈರ್ಯದಚಲವೆ, ಧೈರ್ಯದಂಬುಧಿ, ಜಯತು ! ಜಯಜಯತು !

('ಸ್ವಾಮಿ ವಿವೇಕಾನಂದ'-ಕುವೆಂಪು ಸಮಗ್ರ ಕಾವ್ಯ, ಸಂಪುಟ-1, ಪು-548)

ಶ್ರೀರಾಮಕೃಷ್ಣರ ಜೀವನ ಚರಿತ್ರೆ ಮತ್ತು ಸ್ವಾಮಿ ವಿವೇಕಾನಂದರ ಭಾಷಣಗಳನ್ನು ಓದಿ ಸಂಪೂರ್ಣವಾಗಿ ಪ್ರಭಾವಿತನಾಗಿದ್ದರೂ ನಿತ್ಯವೂ ಅವರನ್ನು ನೆನೆದು ಪ್ರಾರ್ಥಿಸಿ ಪೂಜಿಸುತ್ತಿದ್ದರೂ ನನಗೆ ಶ್ರೀರಾಮಕೃಷ್ಣ ಮಿಶನ್ನಿನ ವಿಚಾರವಾಗಲಿ ಶ್ರೀರಾಮಕೃಷ್ಣಾಶ್ರಮ ಕಾವಿಯನ್ನು ಅಧಿಕಾರದ ಸಮವಸ್ತ್ರವೆಂಬಂತೆ ಧರಿಸಿ ಅಡ್ಡಪಲ್ಲಕ್ಕಿಗಳ ಅಟ್ಟಹಾಸದಿಂದ ಮೆರವಣಿಗೆ ಹೋಗುತ್ತಿದ್ದ ನಮ್ಮ ಸಂಪ್ರದಾಯದ ಮಠಾಧೀಶ್ವರ ಸನ್ಯಾಸಿಗಳಲ್ಲಿಯೂ ಭಿಕ್ಷಾಟನಾ ವೃತ್ತಿಗೆ ರಹದಾರಿ ಎಂಬಂತೆ ಕಾವಿಯುಟ್ಟು ಬೀದಿಗಳಲ್ಲಿ ಅಲೆಯುತ್ತಿದ್ದ ಬೈರಾಗಿಗಳಲ್ಲಿಯೂ ನನಗೆ ಸಮನಾದ ತಿರಸ್ಕಾರವಿದ್ದುದರಿಂದ, ಅವರು ಯಾವ ಸಂಸ್ಥೆಗೇ ಸೇರಿರಲಿ, ಸಂನ್ಯಾಸಿಗಳೆಂದರೇ ನನಗೆ ಅಪನಂಬಿಕೆಯ ವಸ್ತುಗಳಾಗಿದ್ದರು ! ಶ್ರೀರಾಮಕೃಷ್ಣ–ಸ್ವಾಮಿ ವಿವೇಕಾನಂದರ ಶಿಷ್ಯವರ್ಗದವರ ಸಂನ್ಯಾಸವೇ ಬೇರೆಯ ಸ್ವರೂಪದ್ದೆಂದು ತಿಳಿದುದು ಅವರೆಲ್ಲರ ಸರ್ವೋಚ್ಚ ಪ್ರತಿನಿಧಿ ಸ್ವರೂಪವಾಗಿದ್ದ ಸ್ವಾಮಿ ಸಿದ್ದೇಶ್ವರಾನಂದರನ್ನು ಪರಿಚಯಿಸಿಕೊಂಡ ಮೇಲೆಯೇ ! (ನೆನಪಿನ ದೋಣಿಯಲ್ಲಿ–ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ (ರಿ), ಕುಪ್ಪಳಿ–2017 ಪುಟ–573) ಮಠಮಾನ್ಯ, ಸ್ವಾಮೀಜಿ, ಸಂನ್ಯಾಸಿಗಳ ಬಗ್ಗೆ ಅಸಡ್ಡೆಯಿದ್ದ ಕುವೆಂಪು ಅವರಿಗೆ ಆಶ್ರಮದ ಒಡನಾಟದಿಂದ ಶ್ರೀರಾಮಕೃಷ್ಣರ ಮತ್ತು ಸ್ವಾಮಿ ವಿವೇಕಾನಂದರ ಆಧ್ಯಾತ್ಮಿಕ ಸಾಧನೆಯನ್ನು ಕರತಲಾಮಲಕ ಗ್ರಹಿಸಿ, ತಾವೂ ಕೂಡ ನಿಜವಾದ ಸಾಹಿತ್ಯ ತಪಸ್ವಿಗಳು, ಅಧ್ಯಾತ್ಮಿಕ ಜೀವಿಯಾಗಿ ಬದುಕಿ ಸಾಧಕರಾಗುವುದಕ್ಕೆ ಅವರ ಚಿಂತನೆಗಳೇ ಮಾರ್ಗದರ್ಶಕವಾಗಿವೆ. ಕುವೆಂಪು ಅವರು ತಮ್ಮ ಮನೆಯ ದೇವಮಂದಿರದಲ್ಲಿ ಶ್ರೀರಾಮಕೃಷ್ಣ ಪರಮಹಂಸರು, ಸ್ವಾಮಿ ವಿವೇಕಾನಂದರು, ಶ್ರೀ ಶಾರದಾದೇವಿ ಅವರ ಭಾವಚಿತ್ರವನ್ನಿಟ್ಟುಕೊಂಡು ಪ್ರತಿನಿತ್ಯ ಕೆಲವು ಸಮಯದಲ್ಲಿ ಧ್ಯಾನಸ್ಥರಾಗುತ್ತಿದ್ದರು. ಹೀಗೆ ಪರಮಹಂಸರ ಮತ್ತು ವಿವೇಕಾನಂದರ ಆಧ್ಯಾತ್ಮಿಕ ಚಿಂತನೆಗಳಿಗೆ ಮತ್ತು ಭವ್ಯಭಾರತವನ್ನು ನಿರ್ಮಾಣ ಮಾಡುವ ಪ್ರಭಾವಕ್ಕೊಳಗಾಗಿದ್ದರು.

ರಾಷ್ಟ್ರೀಯತೆಯ ಪರಿಕಲ್ಪನೆಯ ನೆಲೆಗಳು ಕುವೆಂಪು ಅವರ ಕಾವ್ಯಗಳಲ್ಲಿ ಹೇರಳವಾಗಿ ದೊರೆಯುತ್ತವೆ. ಕುವೆಂಪು ಅವರಲ್ಲಿ ನವಭಾರತ ನಿರ್ಮಾಣವಾಗಬೇಕೆಂಬ ಆಶಯ ಗಟ್ಟಿಯಾಗಿತ್ತು. ಬ್ರಿಟೀಷರ ಆಡಳಿತದಿಂದ ನಮ್ಮ ದೇಶ ಭೌಗೋಳಿಕವಾಗಿ, ಭಾಷಿಕವಾಗಿ, ಸಾಂಸ್ಕೃತಿಕವಾಗಿ ಛಿದ್ರಛಿದ್ರವಾಗಿತ್ತು. ಸಂಪದ್ಭರಿತವಾದ ನಮ್ಮ ದೇಶವನ್ನು ಕಾಪಾಡಿ ರಕ್ಷಿಸಬೇಕೆಂಬ ಅದಮ್ಯವಾದ ಕನಸಾಗಿತ್ತು. ನಮ್ಮ ದೇಶದ ಸರ್ವಧರ್ಮ ಸಂಸ್ಕೃತಿಯಲ್ಲಿರುವ ಭಿನ್ನಾಭಿಪ್ರಾಯವನ್ನು ಹೋಗಲಾಡಿಸಿ, ಸಮನ್ವಯತೆಯಿಂದ ಸ್ವಾತಂತ್ರ್ಯಕ್ಕೋಸ್ಕರ ಹೋರಾಡಬೇಕೆಂಬ ನಿಲುವು ಎಲ್ಲರಲ್ಲೂ ಒಮ್ಮತದಿಂದ ಮೂಡಬೇಕೆಂಬುದು ಇವರ ಆಶಯ.

ನಡೆ ಮುಂದೆ, ನಡೆ ಮುಂದೆ, ನಡೆ ಮುಂದೆ, ಮುಂದೆ !
ವೇದಾಂತ ಕೇಸರಿಯೆ, ನುಗ್ಗಿ ನಡೆ ಮುಂದೆ !
ಗರ್ಜಿಸುತ ನಡೆ ಮುಂದೆ,
ನಿರ್ಭಯದಿ ನಡೆ ಮುಂದೆ.
'ತತ್ತ್ವಮಸಿ' 'ಬ್ರಹ್ಮಾಸ್ಮಿ' 'ಶಿವನಾನು' ಎಂದು,
ವೀರಾತ್ಮ, ಧೀರಾತ್ಮ, ನಡೆ ನುಗ್ಗು ಮುಂದೆ !
ಹಿಂದಿರುಗಿ ನೋಡದಿರು, ಅಭಯಾತ್ಮ ನೀನು;
ಬೆದರದಿರು ! ಬೆದರದಿರು ! ಅಮೃತಾತ್ಮ ನೀನು !

('ನಡೆಮುಂದೆ'–ಕುವೆಂಪು ಸಮಗ್ರಕಾವ್ಯ ಸಂಪುಟ–1, ಪುಟ–80)

ಕುವೆಂಪು ಅವರ ಕವನದ ಸಾಲುಗಳ ಆಶಯದಲ್ಲಿ ವಿವೇಕಾನಂದರ ವಾಣಿಯ ಸಾಮ್ಯತೆ ಪ್ರತಿಬಿಂಬಿತವಾಗುತ್ತದೆ. ತಮ್ಮ ದೇಶದ ಜನರಿಗೆ 'ಏಳಿ ! ಎದ್ದೇಳಿ ! ಗುರಿಯನ್ನು ಮುಟ್ಟುವವರೆಗೂ ನಿಲ್ಲದಿರಿ' ಎಂದು ಕರೆಕೊಟ್ಟಿದ್ದಾರೆ. ಜನರು ಅವರ ಕರೆಯನ್ನು ಆಲಿಸಿದರು. ದೇಶದಲ್ಲಿ ಒಂದು ದೊಡ್ಡ ಜಾಗೃತಿ ಪ್ರಾರಂಭವಾಯಿತು. ವಿವೇಕಾನಂದರು ಮತ್ತು ಕುವೆಂಪು ಅವರ ವಾಣಿಯಿಂದ ದೇಶದ, ನಾಡಿನ ಜನರಿಗೆ ಪ್ರತ್ಯಕ್ಷವಾಗಿ ಪರೋಕ್ಷವಾಗಿ ದೇಶಾಭಿಮಾನ ಮೂಡುವುದಕ್ಕೆ ಕಾರಣವಾಯಿತು.

ಕುವೆಂಪು ಕರ್ನಾಟಕದಲ್ಲಿದ್ದುಕೊಂಡು ಭಾರತದರ್ಶನವನ್ನೂ ಆ ಮೂಲಕ ವಿಶ್ವಪ್ರಜ್ಞೆಯನ್ನು ಪಡೆಯುತ್ತಾರೆ. ಕನ್ನಡನಾಡು ನುಡಿಯ ಬಗ್ಗೆ ಕರ್ನಾಟಕ ಏಕೀಕರಣದ ದೃಷ್ಟಿಯಿಂದ ಅತ್ಯಂತ ಮೌಲಿಕವಾದ ಸಾಹಿತ್ಯಕೃಷಿ ಮಾಡಿದ್ದಾರೆ. ಕನ್ನಡದ ಜನರನ್ನು ಸಾಹಿತ್ಯದ ಮೂಲಕ ಬಡಿದೆಬ್ಬಿಸಿದ್ದಾರೆ. ಹಾಗೆಯೇ 'ಜಯ ಭಾರತ ಜನನಿಯ ತನುಜಾತೆ, ಜಯಹೇ ಕರ್ನಾಟಕ ಮಾತೆ' ನಾಡಗೀತೆಯ ಈ ಸಾಲುಗಳಲ್ಲಿ ಭಾರತಾಂಬೆಯ ಮಗಳು ಕರ್ನಾಟಕ ಮಾತೆ ಎಂಬ ದೇಶಾಭಿಮಾನವನ್ನು ಈ ನಾಡಿನ ಜನರಿಗೆ ಭಾರತದ ಏಕತ್ವದ ರಕ್ಷಣೆಯ ಮಂತ್ರವನ್ನಾಗಿ ಘೋಷಿಸಿದ್ದಾರೆ. 'ಇಂದಿನ ದೇವರು' ಕವಿತೆಯಲ್ಲಿ :

'ನೂರು ದೇವರನ್ನೆಲ್ಲ ನೂಕಾಚೆ ದೂರ,
ಭಾರತಾಂಬೆಯೆ ದೇವಿ ನಮಗಿಂದು ಪೂಜಿಸುವ ಬಾರ !
ಸತ್ತ ಕಲ್ಲಗಳ ಮುಂದೆ ಅತ್ತು ಕರೆದುದು ಸಾಕು,
ಜೀವದಾತೆಯನಿಂದು ಕೂಗಬೇಕು !
ಶಿಲೆಯ ಮೂರ್ತಿಗೆ ನೆಯ್ದ ಕಲೆಯ ಹೊದಿಕೆಯನೊಯ್ದು
ಚಳಿಯ ಮಳೆಯಲಿ ನವೆವ ತಾಯ್ಗೆ ಹಾಕು !

('ಇಂದಿನ ದೇವರು', ಕುವೆಂಪು ಸಮಗ್ರ ಕಾವ್ಯ–ಸಂಪುಟ–1, ಪುಟ–144)

ಶತಶತಮಾನಗಳಿಂದ ಶ್ರೀಸಾಮಾನ್ಯರ ಸ್ವಾತಂತ್ರ್ಯ ಹರಣಮಾಡಿ ಸೃಜನಶೀಲತೆಯನ್ನು ನಾಶಮಾಡಿದ್ದರಿಂದ ಅಜ್ಞಾನಕ್ಕೆ ಬಲಿಯಾಗಿದ್ದರು. ಮೌಢ್ಯಪರಂಪರೆ ಅಂಟಿಕೊಂಡು ಹಳೆಯ ಕಟ್ಟುಕಟ್ಟಳೆಗಳು ಕಂದಾಚಾರಗಳ ಜಾಡ್ಯಗಳಿಗೆ ಮಾರು ಹೋಗಿದ್ದರಿಂದ ನಮ್ಮ ದೇಶ ಇಷ್ಟೊಂದು ಕೆಳಮಟ್ಟದಲ್ಲಿರುವುದಕ್ಕೆ ಕಾರಣ. ಇಂತಹ ಆಚರಣೆಗಳಿಂದ ಯಾವ ಪ್ರಗತಿಯನ್ನು ಸಾಧಿಸುವುದಕ್ಕಾಗುವುದಿಲ್ಲ. ಅದು ಶೋಷಣೆಗೆ ದಾರಿ ಮಾಡಿಕೊಡುತ್ತದೆ. ಆದುದರಿಂದ ಇಂತಹ ಗೊಡ್ಡು ಆಚರಣೆಗಳನ್ನು ನಿರಾಕರಿಸಿ ಭಾರತಾಂಬೆಯೇ ನಿಜವಾದ ದೇವರು ಎಂದು ಒಮ್ಮತದಿಂದ ಪೂಜಿಸಬೇಕು. ಭಾರತದಲ್ಲಿ ಸಾಮಾಜಿಕವಾಗಿ ಅಧೋಗತಿಗೆ ಇಳಿದಿರುವ ಬಡವರಿಗೆ, ನಿರ್ಗತಿಕರಿಗೆ ನೆರವಾಗಬೇಕು ಎಂಬುದು 'ಕಲೆಯ ಹೊದಿಕೆಯನೊಯ್ದು ಚಳಿಯ ಮಳೆಯಲಿ ನವೆವ ತಾಯ್ಗೆ ಹಾಕು' ಎಂಬ ಮಾತು ಧ್ವನಿಪೂರ್ಣವಾಗಿದೆ.

ವಿವೇಕಾನಂದರು ಮೂಢನಂಬಿಕೆಯನ್ನು ಬಲವಾಗಿ ವಿರೋಧಿಸಿದರು. 'ಮೂಢನಂಬಿಕೆಯೆನ್ನುವುದು ಮಾನವನ ಅತ್ಯಂತ ದೊಡ್ಡ ಶತ್ರು' ಎಂದಿದ್ದಾರೆ. ಮನುಷ್ಯನಲ್ಲಿ ಮೌಢ್ಯವು ಪ್ರವೇಶ ಮಾಡಿದರೆ ಆತನ ಮಿದುಳು ನಾಶವಾಗುತ್ತದೆ. ಪವಾಡ ಮತ್ತು ಮೂಢನಂಬಿಕೆಗಳು ಯಾವಾಗಲೂ ದುರ್ಬಲತೆಯ ಲಕ್ಷಣಗಳೇ ಆಗಿವೆ. ಅವು ಯಾವಾಗಲೂ ಅಧಃಪತನದ ಮತ್ತು ಮೃತ್ಯುವಿನ ಸಂಕೇತಗಳು. ಆದ್ದರಿಂದ ಪ್ರತಿಯೊಬ್ಬರೂ ಎಚ್ಚರಿಕೆಯಿಂದ ಇದ್ದು, ಶಕ್ತಿವಂತನಾಗಿರಬೇಕು. ನೀನು ಸ್ವತಂತ್ರವಾಗಿ ಬದುಕಿ ದೇಶಕ್ಕೋಸ್ಕರ ಸೇವೆ ಮತ್ತು ತ್ಯಾಗ ಮಾಡಿ ಎಂದು ಕರೆಕೊಟ್ಟಿದ್ದಾರೆ. ಮನಸ್ಸನ್ನು

ದುರ್ಬಲಗೊಳಿಸುವ, ಮೂಢನಂಬಿಕೆಗಳ ದಾಸನನ್ನಾಗಿ ಮಾಡುವ, ಒಬ್ಬನ ಮನಸ್ಸನ್ನು ಮಂಕುಗೊಳಿಸುವ, ಅಸಾಧ್ಯವಾದ ಎಲ್ಲ ಬಗೆಯ ಊಹಾಪೋಹಗಳನ್ನು, ರಹಸ್ಯವಾದವುಗಳನ್ನು ಮತ್ತು ಮೂಢಾಚರಣೆಗಳನ್ನು ಬಯಸುವಂತೆ ಮಾಡುವ, ಯಾವುದೇ ವ್ಯವಸ್ಥೆಯನ್ನೂ ನಾನು ಇಷ್ಟಪಡುವುದಿಲ್ಲ. ಏಕೆಂದರೆ ಅದರ ಪರಿಣಾಮ ಭಯಂಕರವಾದುದು. ಅಂಥ ವ್ಯವಸ್ಥೆಗಳು ನಮಗೆ ಯಾವ ಒಳಿತನ್ನೂ ತರಲಾರವು, ಅಂಥ ಸಂಗತಿಗಳು ನಮಗೆ ಮಾನಸಿಕ ಜಾಡ್ಯವನ್ನು ಉಂಟುಮಾಡುತ್ತವೆ, ನಮ್ಮನ್ನು ದುರ್ಬಲರನ್ನಾಗಿ ಮಾಡುತ್ತವೆ. ಕಾಲಕಳೆದಂತೆ ಸತ್ಯವನ್ನು ಸ್ವೀಕರಿಸುವುದು ಮತ್ತು ಅದರಂತೆ ಬಾಳುವುದು ನಮಗೆ ಅಸಾಧ್ಯವಾಗಿ ಬಿಡುತ್ತದೆ. ಆದ್ದರಿಂದ ಒಬ್ಬ ವ್ಯಕ್ತಿಯು ಶಕ್ತಿಯುತ ಮತ್ತು ಸ್ಪಷ್ಟವಾದ ಮಿದುಳನ್ನು ಹೊಂದಿರಬೇಕು. ಮೌಢ್ಯಭಾವನೆಗಳಿಂದ ಮುಕ್ತವಾದ ಮನಸ್ಸನ್ನು ಹೊಂದಿರಬೇಕು. ಅವನು ತನ್ನ ಮನಸ್ಸನ್ನು ಕವಿದಿರುವ ಮೂಢನಂಬಿಕೆಗಳ ರಾಶಿಯನ್ನು ಭೇದಿಸಿ, ತನ್ನ ಅಂತರಂಗದ ಆತ್ಮವೇ ಆಗಿರುವ ಪರಿಶುದ್ಧ ಸತ್ಯವನ್ನು ಕಾಣಬೇಕು. ಮೌಢ್ಯವನ್ನು ನಾಶಪಡಿಸಬೇಕೆಂದರೆ ವೀರ ಧೀರ ವ್ಯಕ್ತಿಗಳಾಗಬೇಕು. ನಮಗೆ ಬೇಕಾಗಿರುವುದು ರಕ್ತದಲ್ಲಿ ಧೀರತೆ, ನರಗಳಲ್ಲಿ ಶಕ್ತಿ, ಕಬ್ಬಿಣದ ಮಾಂಸಖಂಡಗಳು ಮತ್ತು ಉಕ್ಕಿನ ನರಗಳು. ನಮ್ಮನ್ನು ಮೃದು ಮಾಡುವ ವಿಚಾರಗಳು ನಮಗೆ ಬೇಡ ಎಂದು ಕರೆಕೊಟ್ಟಿದ್ದಾರೆ.

ವಿವೇಕಾನಂದರು ದೇಶಸೇವೆಗಾಗಿ ಧನಸಂಪಾದಿಸಲು ಪಶ್ಚಿಮ ದೇಶಗಳಿಗೆ ಹೋಗುತ್ತೇನೆ ಎಂದು ಪ್ರತಿಜ್ಞೆಯನ್ನು ಮಾಡಿದ್ದರು. ಧರ್ಮಮಹಾಸಭೆಯಲ್ಲಿ ಕ್ರೈಸ್ತರನ್ನು ಸಂಬೋಧಿಸಿ ನಿರ್ಭೀತರಾಗಿ ಹೀಗೆ ಹೇಳಿದರು : ಭಾರತ ದೇಶದಲ್ಲಿ ಎಲ್ಲೆಲ್ಲಿಯೂ ಚರ್ಚುಗಳನ್ನು ಮಾತ್ರ ಕಟ್ಟುತ್ತಿದ್ದೀರಿ. ನಮ್ಮ ದೇಶಕ್ಕೆ ಬೇಕಾಗಿರುವುದು ನಿಮ್ಮ ಧರ್ಮೋಪದೇಶವಲ್ಲ. ಪ್ರಪಂಚದಲ್ಲೇ ಅತ್ಯಂತ ಶ್ರೇಷ್ಠವಾದ ಪ್ರಾಚೀನ ಸನಾತನಧರ್ಮ ನಮ್ಮ ದೇಶದಲ್ಲಿದೆ. ಆದರೆ ಹಸಿವೆಯಿಂದ ದಿನವೂ ಸಾಯುತ್ತಿರುವ ಭರತಖಂಡದ ಲಕ್ಷಾಂತರ ಜನಗಳು ಧರ್ಮ ಧರ್ಮ ಎಂದು ಒರಲುತ್ತಿಲ್ಲ. ಅನ್ನ ಅನ್ನ ಎಂದು ಒಣಗಿದ ಗಂಟಲಿಂದ ಕಿರುಚುತ್ತಿದ್ದಾರೆ. ಅವರು ಕೇಳುವುದು ಅನ್ನ ಮಾತ್ರ. ನೀವು ಕೊಡುವುದು ಮಣ್ಣು. ಹಸಿವೆಯಿಂದ ಬಳಲಿ ಸಾಯುತ್ತಿರುವ ಜನಾಂಗಕ್ಕೆ ಧರ್ಮೋಪದೇಶ ಮಾಡುವುದು ಒಂದು ಮಹಾನೀಚಕಾರ್ಯ. ಹಸಿದವನಿಗೆ ವೇದಾಂತ ಬೋಧಿಸುವುದು ಒಂದು ಅಧಮಾದಮ ಪಾಪ ಎಂದು ಭಾರತದ ದುಸ್ಥಿತಿಗೆ ಕಾರಣವಾಗಿರುವ ಬ್ರಿಟೀಷ್ ಆಡಳಿತವರ್ಗವನ್ನು ಖಂಡಿಸಿದ್ದರು. ಸರ್ವಧರ್ಮ ಸಮ್ಮೇಳನದಲ್ಲಿ ಸ್ವಾಮೀಜಿಗಳು ಮಾತನಾಡಿದ ಅಖಂಡ ಬೌದ್ಧಿಕ ವಾಗ್ಝರಿಯಿಂದ ಇಡೀ ಜಗತ್ತೇ ಭಾರತವನ್ನು ಅತ್ಯಂತ ಗೌರವದಿಂದ ನೋಡುವುದಕ್ಕೆ ಕಾರಣವಾಯಿತು. ಆ ಒಂದು ದಿನದಲ್ಲೇ ವಿವೇಕಾನಂದರು ಜಗತ್‌ವಿಖ್ಯಾತವಾಗಿ ವಿಶ್ವನಾಯಕರಾದರು. ಆ ದಿನ ಶಿಕಾಗೋ ನಗರದ ಶ್ರೀಮಂತನೊಬ್ಬ ಮನೆಗೆ ಕರೆದೊಯ್ದು ರಾಜಯೋಗ್ಯವಾದ ಅತಿಥಿಸತ್ಕಾರ ಸನ್ಮಾನಗಳನ್ನು ಮಾಡಿ, ರಾಜಭವನ ಸದೃಶವಾದ ಐಷರಾಮಿ ಕೊಠಡಿಯನ್ನು ವ್ಯವಸ್ಥೆ ಮಾಡುತ್ತಾನೆ. ಆದರೆ ವಿವೇಕಾನಂದರು ಅಮೇರಿಕಾದ ಶ್ರೀಮಂತಿಕೆ ಮತ್ತು ಭಾರತದ ಬಡತನಕ್ಕೂ ಇರುವ ತಾರತಮ್ಯದ ಬಗ್ಗೆ ಪಿಶಾಚ ವಿಕಟಾಕಾರವಾಗಿ ಅವರೆದುರು ನಿಂತಿತು. ಐಷರಾಮಿ ಉಪಚಾರವನ್ನು ಅಪೇಕ್ಷಿಸದೆ ತಿರಸ್ಕರಿಸಿ, ಅವರಿಗೆ ನಿದ್ರೆ ಬಾರದೆ ಭಾರತದ ದುಃಸ್ಥಿತಿಯನ್ನು ನೆನಪು ಮಾಡಿಕೊಂಡು ಈ ರೀತಿ ಮರುಗುತ್ತಾರೆ : “ ಹೇ ಜಗಜ್ಜನನಿ, ನನ್ನ ಮಾತೃಭೂಮಿ ಬಡತನದಲ್ಲಿ ಬಿದ್ದು ನರಳುತ್ತಿದೆ, ಕೀರ್ತಿಯಿಂದ ನನಗೆ ಆಗಬೇಕಾದುದೇನು ? ಅಯ್ಯೋ ನಮಗೆಂತಹ ದುರವಸ್ಥೆ ಬಂದೊದಗಿದೆ ? ಒಂದು ತುತ್ತು ಕೂಳಿಗೆ ಗತಿಯಿಲ್ಲವಲ್ಲ ! ಇಲ್ಲಿಯಾದರೊ ಜನಗಳು ಐಶ್ವರ್ಯದಲ್ಲಿ ಓಲಾಡುತ್ತಿದ್ದಾರೆ. ಭಾರತೀಯರನ್ನು ಮೇಲೆತ್ತುವವರಾರು ? ಹಸಿದವರಿಗೆ ಅನ್ನವಿಕ್ಕುವರಾರು ? ಹೇ ಜಗಜ್ಜನನಿ, ನಮಗಾವುದಾದರು ದಾರಿ ತೋರು !” ಎಂದು ಪ್ರಾರ್ಥಿಸುತ್ತ ರಾತ್ರಿಯನ್ನು ಕಳೆದರಂತೆ. (ಸ್ವಾಮಿವಿವೇಕಾನಂದ–ಕುವೆಂಪು–1999) ಹೀಗೆ ದೇಶಾಭಿಮಾನದ ಹೃದಯಸ್ಪರ್ಶಿ ಸಂವೇದನೆಯನ್ನು ವ್ಯಕ್ತಪಡಿಸಿರುವುದು ಅವರ ಮೇರು ವ್ಯಕ್ತಿತ್ವವನ್ನು ಅನಾವರಣಗೊಳಿಸುತ್ತದೆ.

ನಾವೆಲ್ಲರೂ ಸೇರಿ ಭವ್ಯಭಾರತವನ್ನು ನಿರ್ಮಾಣ ಮಾಡಬೇಕಾದರೆ ‘ಭಯಂಕರ ದಾರಿದ್ರ್ಯದಿಂದ ಪುರೋಹಿತರ ದೌರಾತ್ಮ್ಯದಿಂದ ಅಧೋಗತಿಗಿಳಿದಿರುವ ಭರತಖಂಡದ ಲಕ್ಷೋಪಲಕ್ಷ ಜೀವಿಗಳ ಮೇಲ್ಮೆಗಾಗಿ ನಾವೆಲ್ಲರೂ ಪ್ರಾರ್ಥಿಸಬೇಕು. ಅಂದರೆ ಅವರಿಗೆ ಅನ್ನ, ಶಿಕ್ಷಣವನ್ನು ಕೊಟ್ಟು ಆರ್ಥಿಕವಾಗಿ ನೆರವಾಗಿ, ಸಾಮಾಜಿಕವಾಗಿ ಅರಿವು ಮೂಡಿಸಿ ಮೇಲೆ ತರಬೇಕೆಂದು ಕರೆ ನೀಡಿದ್ದಾರೆ. ನಾನು ತತ್ತ್ವವೇತ್ತನಲ್ಲ, ಧರ್ಮಗುರುವಲ್ಲ, ಮಹರ್ಷಿಯಲ್ಲ–ದರಿದ್ರರಿಗಾಗಿ ಮರುಗುವ ನಾನೊಬ್ಬ ದರಿದ್ರ. ದಾರಿದ್ರ್ಯ, ಮೌಢ್ಯಗಳಲ್ಲಿ ಮುಳುಗಿ ನರಳುತ್ತಿರುವ ಭಾರತೀಯ ಸ್ತ್ರೀಪುರುಷರಿಗಾಗಿ ಗೋಳಿಡುವವರು ಯಾರಿದ್ದಾರೆ ? ಮಾರ್ಗವೆಲ್ಲಿ ? ಎಂದು ಅವರಿಗಾಗಿ ಮರುಗಿ, ಕೆಲಸಮಾಡಿ, ಪ್ರಾರ್ಥಿಸಿ, ಈಶ್ವರನು ದಾರಿ ತೋರಿಸುತ್ತಾನೆ ಎಂದು ದೇಶದ ಅಸಹಾಯಕರ ಪರವಾಗಿ ಸೇವಾತತ್ಪರರಾಗಿ ತನ್ನ ಜೀವನವನ್ನೇ ತ್ಯಾಗ ಮಾಡಿದ ಆಧ್ಯಾತ್ಮಿಕ ಚಿಂತಕ, ಸಂತ ವಿವೇಕಾನಂದರು.

ಕುವೆಂಪು ಅವರು “ಶ್ರೀಸಾಮಾನ್ಯವೆ ಭಗವನ್ ಮಾನ್ಯಂ, ಶ್ರೀಸಾಮಾನ್ಯನೆ ಭಗವದ್ ಧನ್ಯಂ” ಎಂಬ ಮಂತ್ರವನ್ನು ನಮ್ಮ ಮುಂದಿಟ್ಟಿರುವುದು ಕೆಳವರ್ಗದವರ, ಜನಸಾಮಾನ್ಯರ, ರೈತರ ಏಳಿಗೆಯ ಪ್ರತೀಕವಾಗಿದೆ. ‘ಶ್ರೀಸಾಮಾನ್ಯ’ ಪದವೇ ಬಹಳ ಅರ್ಥವತ್ತಾದುದು. “ಸಾಮಾನ್ಯತೆ ಭಗವಂತನ ರೀತಿ; ಸಾಮಾನ್ಯವೆ ದಿಟ ಭಗವತ್ ಪ್ರೀತಿ” ಎಂಬುದು ಸಮಷ್ಟಿಹಿತದ ಕಾರ್ಯತಂತ್ರವಾಗಬೇಕೆಂದು ಅವರು ಬಯಸಿದರು. ‘ಸಾಮಾನ್ಯವೇ ಸರ್ವಸಾಮಾನ್ಯ’ ಎಂಬುದು ದಿನಬಳಕೆಯ ಸರ್ವಸಾಮಾನ್ಯ ಸತ್ಯವಾದಾಗ ಜಗತ್‌ಶಾಂತಿ ಸ್ವತಃಸಿದ್ಧವಾಗುತ್ತದೆಂದು ವಿವೇಕಾನಂದರ ಜೀವನ ಸಂದೇಶದಿಂದ ತೋರಿಸಿಕೊಟ್ಟರು. (ಕುವೆಂಪು ಅವರ ವೈಚಾರಿಕತೆ–ಡಾ.ಎಚ್.ತಿಪ್ಪೇರುದ್ರಸ್ವಾಮಿ) ಸ್ವಾತಂತ್ರ್ಯೋತ್ತರ ಭಾರತದ ಸಾಮಾಜಿಕ ಜೀವನ, ಶ್ರೀಸಾಮಾನ್ಯನ ಬದುಕಿನ ಸರ್ವಾಂಗೀಣ ಪ್ರಗತಿಯನ್ನು ಸಾಧಿಸುತ್ತದೆಂದು, ಸರ್ವೋದಯವಾಗುತ್ತದೆಂದು ಕುವೆಂಪು ನಂಬಿದ್ದರು ಹಾಗೂ ಕನಸನ್ನು ಕಂಡಿದ್ದರು.

> “ಸರ್ವರಿಗೆ ಸಮಬಾಳು ! ಸರ್ವರಿಗೆ ಸಮಪಾಲು !”
> ಎಂಬ ನವಯುಗವಾಣಿ ಘೋಷಿಸಿದೆ ಕೇಳಿ !
> ಯುಗಯುಗದ ದಾರಿದ್ರ್ಯ ಭಾರದಿಂ ಬೆನ್‌ಬಾಗಿ
> ಗೋಳಿಡುವ ಬಡಜನರೆ, ಏಳಿರೈ ಏಳಿ !”

(‘ಹೊಸಬಾಳಿನಗೀತೆ’, ಕುವೆಂಪು ಸಮಗ್ರ ಕಾವ್ಯ–ಸಂಪುಟ–1, ಪು–373)

ಭಾರತವು ಸಾಮಾಜಿಕ ಅಸಮಾನತೆಯಿಂದ ತತ್ತರಿಸಿದ್ದ ಬಡವರ, ನಿರ್ಗತಿಕರ ಬದುಕನ್ನು ಹಸನುಗೊಳಿಸಬೇಕೆಂಬ ಹಂಬಲದಿಂದ ಈ ಕವಿತೆಯಲ್ಲಿ ಸರ್ವೋದಯ ಮಂತ್ರವನ್ನು ಬಳಸಿದ್ದಾರೆ. ಭಾರತದ ಬಹುಪಾಲು ಸಾಮಾಜಿಕ ವ್ಯವಸ್ಥೆಯಲ್ಲಿ ಮೇಲು ಕೀಳಿನ ಜಾತಿಪದ್ಧತಿಯು ಜಡ್ಡುಗಟ್ಟಿದೆ. ಇದರಿಂದ ಶ್ರೀಸಾಮಾನ್ಯನ ಶ್ರೇಯೋಭಿವೃದ್ಧಿ ಸಾಧ್ಯವಾಗುವುದಿಲ್ಲ ಎಂದು ನಂಬಿದ್ದರು. ಈ

ಒಂದು ದೃಷ್ಟಿಯಿಂದ ನವಯುಗದ ಹರಿಕಾರರಾಗಿ ಕ್ರಾಂತಿಕಾರಕ ಭಾವನೆಗಳನ್ನು ತಮ್ಮ ಕವನಗಳಲ್ಲಿ ಘೋಷಿಸಿದರು. ವಸಾಹತುಶಾಹಿಯ ಸಂಸ್ಕೃತಿಯಿಂದ ಉಂಟಾದ ಅನೇಕ ಆಘಾತಕಾರಿ ದುರಂತಗಳ ನಡುವೆಯೂ, ಸಾಮಾಜಿಕ ನ್ಯಾಯದ ಭರವಸೆಯನ್ನು ಜನಸಾಮಾನ್ಯರಲ್ಲಿ ತುಂಬಿದವರು ಕುವೆಂಪು.

ಗುಡಿಚರ್ಚು ಮಸಜೀದಿಗಳ ಬಿಟ್ಟು ಹೊರಬನ್ನಿ,
ಬಡತನವ ಬುಡಮುಟ್ಟ ಕೀಳ ಬನ್ನಿ.
ಮೌಢ್ಯತೆಯ ಮಾರಿಯನು ಹೊರದೂಡಲೈತನ್ನಿ,
ವಿಜ್ಞಾನ ದೀವಿಗೆಯ ಹಿಡಿಯ ಬನ್ನಿ
ಓ, ಬನ್ನಿ, ಸೋದರರೇ, ಬೇಗಬನ್ನಿ !
ಸಿಲುಕದಿರಿ ಮತವೆಂಬ ಮೋಹದ ಜ್ವಾನಕ್ಕೆ;
ಮತಿಯಿಂದ ದುಡಿಯಿರೈ ಲೋಕಹಿತಕೆ.
ಆ ಮತದ ಈ ಮತದ ಹಳೆಮತದ ಸಹವಾಸ
ಸಾಕಿನ್ನು ಸೇರಿರೈ ಮನುಜಮತಕೆ.
ಓ, ಬನ್ನಿ, ಸೋದರರೆ, ವಿಶ್ವಪಥಕೆ !

(ಓ, ಬನ್ನಿ ಸೋದರರೆ, ಬೇಗ ಬನ್ನಿ ! ಕುವೆಂಪು ಸಮಗ್ರ ಕ ಾವ್ಯ, ಸಂಪುಟ–1, ಪುಟ–372)

ಬಡವರು ಉದ್ಧಾರವಾಗದ ಹೊರತು, ದೇಶವನ್ನು ಮುಂದೆ ತರುವುದಕ್ಕೆ ಸಾಧ್ಯವಿಲ್ಲವೆಂಬುದು ವಿವೇಕಾನಂದರ ವಾಣಿಯೂ ಹೌದು; ಕುವೆಂಪು ಅವರ ಆಶಯವೂ ಹೌದು. ಬಡತನವನ್ನು ಬುಡಸಮೇತ ಕಿತ್ತು ಹಾಕಬೇಕು. ನಮ್ಮ ದೇಶದಲ್ಲಿ ಬಹಳಷ್ಟು ಮೌಢ್ಯತೆ, ಜಾತಿ, ಮತ, ಕುಲ ತಾಂಡವವಾಡುತ್ತಿದ್ದು, ದೇಶದ ಜನ ಹಿಂದುಳಿಯುವುದಕ್ಕೆ ಮೂಲ ಕಾರಣವಾಗಿದೆ. ಇದನ್ನು ಹೋಗಲಾಡಿಸಿ ವೈಜ್ಞಾನಿಕವಾಗಿ ವೈಚಾರಿಕವಾಗಿ ಚಿಂತಿಸುವಂತಹ ಶಿಕ್ಷಣ ಕೊಟ್ಟು ಸಮಾಜಮುಖಿ ಹಾಗೂ ವಿಶ್ವಮುಖಿಯಾಗಿ ಚಿಂತಿಸುವಂತೆ ಮಾಡಬೇಕೆಂಬುದು ಕುವೆಂಪು ಅವರ ಸಾಮಾಜಿಕ ದೃಷ್ಟಿಕೋನ.

"ಓ ನನ್ನ ಚೇತನ
ಆಗು ನೀ ಅನಿಕೇತ"

ಕುವೆಂಪು ಅವರ ವಿಶ್ವಮಾನವ ಸಂದೇಶವನ್ನು ಸಾರಿರುವ 'ಅನಿಕೇತನ' ಕವನ ಅತ್ಯಂತ ಶ್ರೇಷ್ಠವಾದ ವೈಚಾರಿಕ, ವೈಜ್ಞಾನಿಕ, ಸಾಮಾಜಿಕ, ಆಧ್ಯಾತ್ಮಿಕ ಆಶಯವನ್ನೊಳಗೊಂಡ 'ವಿಶ್ವಮಾನವಗೀತೆ'ಯಾಗಿ ಪ್ರಸಿದ್ಧಿಯಾಗಿದೆ. ಇದನ್ನು ಒಂದು ಕವನವೆಂದು ಪರಿಗಣಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಇದರ ಹೆಸರೇ ಸೂಚಿಸಿರುವಂತೆ ಇದು ವಿಶ್ವದೆಲ್ಲೆಯನ್ನು ದಾಟಿದೆ. ಇದರಲ್ಲಿ ವಿಶ್ವಜನಾಂಗದ ಸಮಗ್ರ ಜೀವನದ ಸಮಷ್ಟೀ ಆಶಯಗಳು ಮಡುಗಟ್ಟಿವೆ. ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ, ಮನುಜಮತ, ವಿಶ್ವಪಥ ಈ ಪಂಚಮಂತ್ರಗಳು ವಿಶ್ವಜನಾಂಗದ ಭವಿಷ್ಯತ್ತಿನ ದೃಷ್ಟಿಯಾಗಬೇಕು. ಈ ಪರಿಕಲ್ಪನೆ ಕುವೆಂಪು ಅವರು ಪ್ರತಿಪಾದಿಸಿದ ಬಹುಮುಖ್ಯ ತಾತ್ವಿಕ ನಿಲುವು.

ಇಪ್ಪತ್ತನೆಯ ಶತಮಾನದ ಮಹಾಕವಿ ಎಂದು ಪ್ರಖ್ಯಾತವಾಗಿರುವ ಕುವೆಂಪು ರಚಿಸಿರುವ 'ಶ್ರೀರಾಮಾಯಣದರ್ಶನಂ' ಕೃತಿ ಪ್ರಪಂಚದಲ್ಲಿಯೇ ಶಿಖರಪ್ರಾಯವಾದುದು. ಅನ್ನಮಯ ಪ್ರಾಣಮಯ, ಮನೋಮಯ, ವಿಜ್ಞಾನಮಯ ನೆಲೆಯಲ್ಲಿ ರಚಿತವಾಗಿರುವ ಮಹಾಕಾವ್ಯದಲ್ಲಿ ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ–ಇವುಗಳು ತ್ರಿನೇತ್ರಗಳಾಗಿವೆ. 'ಪಾಪಿಗುದ್ಧಾರಮಿಹುದೌ ಸೃಷ್ಟಿಯ ಮಹದ್ವ್ಯೂಹ ರಚನೆಯೊಳ್'– ಎಂದು ಭರತನ ಪಾತ್ರದ ಮೂಲಕ ವ್ಯಕ್ತವಾಗಿರುವ ಮಾತಿನಲ್ಲಿ ಔಚಿತ್ಯವಿದ್ದು, ಕಾವ್ಯದಲ್ಲಿ ಬರುವ ಪ್ರತಿಯೊಂದು ಪಾತ್ರಕ್ಕೂ ಜೀವತುಂಬಿದ್ದಾರೆ. ಮನುಷ್ಯ ಯಾವಾಗಲು ನಕಾರಾತ್ಮಕವಾಗಿ ಚಿಂತಿಸುವುದು ಮುಖ್ಯವಲ್ಲ; ಸಕಾರಾತ್ಮಕವಾಗಿಯೂ ಆಲೋಚಿಸುವುದು ಮುಖ್ಯ ಎಂಬುದನ್ನು ಕಾವ್ಯದಲ್ಲಿ ಮಂಥರೆ, ರಾವಣ, ಚಂದ್ರನಖಿ ಇತರೆ ಪಾತ್ರಗಳ ಚಿತ್ರಣದಲ್ಲಿ ಮನನವಾಗುತ್ತದೆ. ತಾವು ಮಾಡಿರುವ ಪಾಪಕೃತ್ಯ ಅಥವಾ ಪ್ರಮಾದಕ್ಕೆ ಪ್ರತಿಯಾಗಿ ಪಶ್ಚತ್ತಾಪಪಟ್ಟು ಪ್ರಾಯಶ್ಚಿತ್ತವನ್ನು ಬಯಸುವ ಸನ್ನಿವೇಶವನ್ನು ಅತ್ಯಂತ ವಿಶಿಷ್ಟವಾಗಿ ಮಾನವತ್ವದ ನೆಲೆಯಲ್ಲಿ ರಚಿಸಿರುವುದು ಸಮಾಜಮುಖಿ ಮತ್ತು ವಿಶ್ವಮುಖಿ ಚಿಂತನೆಯ ಪ್ರತೀಕವಾಗಿದೆ. ಈ ಕೃತಿಯ ರಚನೆಯನ್ನು ಒಂಬತ್ತು ವರ್ಷಗಳವರೆಗೆ ಕೈಗೊಂಡಂತಹ ಸಂದರ್ಭದಲ್ಲಿ ಅದು ಅವರನ್ನು ಸಂಪೂರ್ಣವಾಗಿ ಆಕ್ರಮಿಸಿ ವಲ್ಮೀಕವನ್ನು ಹೊದಿಸಿತ್ತು. ರಾಮಾಯಣ ಲೋಕದ ವಿಹಾರಿಯಾಗಿದ್ದರು. ಆ ಸಂದರ್ಭದಲ್ಲಿ ಯಾರಾದರೂ ಅಕಸ್ಮಾತ್ ಎಲ್ಲಿಂದ ಬಂದಿರಿ ? ಎಂದು ಕುವೆಂಪು ಅವರನ್ನು ಕೇಳಿದರೆ 'ಅಯೋಧ್ಯೆಯಿಂದ ಬಂದೆ, ಪಂಚವಟಿಯಿಂದ ಬಂದೆ, ಕಿಷ್ಕಿಂದೆಯಿಂದ ಬಂದೆ' ಎನ್ನುತ್ತಿದ್ದರು. ಹೀಗೆ ವಿದ್ವತ್ತಿನ ಜೊತೆಗೆ ಏಕಾಗ್ರತೆ, ಶಿಸ್ತು, ಸಂಯಮವಿದ್ದುದರಿಂದ ತಪಸ್ವಿಯಂತೆ ಅಧ್ಯಾತ್ಮಲೋಕದಲ್ಲಿ ವಿಹರಿಸುತ್ತಿದ್ದು ಒಂದು ರೀತಿಯಲ್ಲಿ ಸಂತರಾಗಿದ್ದರು ಕುವೆಂಪು.

ರೈತಪರವಾದ ನಿಲುವುಗಳು ಕುವೆಂಪು ಅವರ ಕವನಗಳಲ್ಲಿ, ಕಥೆಗಳಲ್ಲಿ, ಕಾದಂಬರಿಗಳಲ್ಲಿ ವಿಫುಲವಾಗಿ ದೊರೆಯುತ್ತವೆ. 'ನೇಗಿಲಯೋಗಿ' ರೈತಗೀತೆಯ ಶೀರ್ಷಿಕೆಯು ಧ್ವನಿಪೂರ್ಣವಾಗಿದೆ. ಪ್ರಪಂಚದಲ್ಲಿ ಏನೆಲ್ಲ ಬದಲಾವಣೆಯಾದರೂ ಕರ್ಮಜೀವಿಯಾದ ರೈತ ಮಾತ್ರ ತನ್ನ ಕಾಯಕವನ್ನು ನಿಲ್ಲಿಸುವುದಿಲ್ಲ. ಆತನದು ನಿರಂತರ ದುಡಿಮೆ, ಶ್ರಮದ ಬೆವರಿನ ಫಲ, ದೇಶದ ಶಕ್ತಿ, ಸಂಸ್ಕೃತಿಯ ಆಸಕ್ತಿ. ಪ್ರಸಕ್ತ ಜಾಗತಿಕ ಕಾಲಘಟ್ಟದಲ್ಲಿ ಎಲ್ಲ ವೃತ್ತಿಗಳು ಆಧುನಿಕತೆಯನ್ನು ಪಡೆದು ಆರ್ಥಿಕವಾಗಿ ಸಬಲತೆಯನ್ನು ಪಡೆದಿವೆ. ಆದರೆ ರೈತಮಾತ್ರ ದೇಶಕ್ಕೆ ನಿರಂತರವಾಗಿ ಅನ್ನ ನೀಡುತ್ತಿದ್ದು ಪುರಾತನ ಕಾಲದಿಂದಲೂ ಪ್ರಸ್ತುತದವರೆಗೂ ಶೋಷಿತನಾಗುತ್ತಲೇ ಬರುತ್ತಿದ್ದಾನೆ ಎಂಬ ಮರುಕ ಕುವೆಂಪು ಅವರ ಕೃತಿಗಳಲ್ಲಿ ನಿರೂಪಿತವಾಗಿವೆ. ನಮ್ಮ ದೇಶ ಹಳ್ಳಿಗಳಿಂದ ಕೂಡಿರುವ ದೇಶ. ಬಹುತೇಕವಾಗಿ ನಮ್ಮ ದೇಶದ ಜನರು ಕೃಷಿಯನ್ನೆ ಅವಲಂಬಿಸಿ ಬದುಕುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ರೈತರು ನಷ್ಟಕ್ಕೊಳಗಾಗಿ, ಆರ್ಥಿಕವಾಗಿ ಸಂಕಷ್ಟಕ್ಕೀಡಾಗುತ್ತಿರುವುದು ಮತ್ತು ಆತ್ಮಹತ್ಯೆಗೆ ಬಲಿಯಾಗುತ್ತಿರುವ ಅನೇಕ ಘಟನೆಗಳನ್ನು ನಮ್ಮ ದೇಶದ ಜನರು ಗಮನಿಸುತ್ತಿದ್ದಾರೆ. ಈ ಒಂದು ದೃಷ್ಟಿಯಿಂದಲೇ ಕುವೆಂಪು ರೈತಪರವಾದ ಚಿಂತನೆಗಳನ್ನು ಸಾಮಾಜಿಕ ನೆಲೆಯಲ್ಲಿ ಗುರುತಿಸಿ ತಮ್ಮ ಬರಹದಲ್ಲಿ ಸ್ಪಷ್ಟಪಡಿಸಿದ್ದಾರೆ. ಇದಕ್ಕೆ ಸರ್ಕಾರ ಶಾಶ್ವತ ಪರಿಹಾರವನ್ನು ಯಾವಾಗ ಹೇಗೆ ನೀಡುತ್ತದೆ ಎಂಬುದೇ ಯಕ್ಷ ಪ್ರಶ್ನೆಯಾಗಿದೆ.

ಕುವೆಂಪು ಅವರ ನಾಟಕಗಳಲ್ಲಿ 'ಜಲಗಾರ' ಶೂದ್ರತಪಸ್ವಿ' ಮತ್ತು 'ಬೆರಳ್‌ಗೆ ಕೊರಳ್' ಕೃತಿಗಳು ಸಾಮಾಜಿಕ ದೃಷ್ಟಿಕೋನದಿಂದ ಅತ್ಯಂತ ಮಹತ್ವಪೂರ್ಣವಾದವುಗಳು. ಸಮಾಜದ ಶ್ರೇಣೀಕರಣ ವ್ಯವಸ್ಥೆಯಲ್ಲಿ ಶೋಷಿತರಾಗಿದ್ದ ಶೂದ್ರಸಮುದಾಯದಲ್ಲಿ ಹುಟ್ಟಿ ಬೆಳೆದ ಜಲಗಾರ, ಶಂಬೂಕ, ಏಕಲವ್ಯ– ಈ ಪಾತ್ರಗಳಲ್ಲಿ ಕುವೆಂಪು ಅವರು ಸಮಾಜಿಕ ಜಾಗೃತಿಯನ್ನು ಮೂಡಿಸಿದ್ದಾರೆ. ಜಲಗಾರನ ಪಾತ್ರದಲ್ಲಿ ಕಾಯಕತತ್ವ, ವೃತ್ತಿಗೌರವ, ಸೇವೆ, ದಾಸೋಹ ಪ್ರಜ್ಞೆ, ಪ್ರೀತಿ, ವಿಶ್ವಾಸಗಳು ಪ್ರತಿಬಿಂಬಿತವಾಗಿ ಸಮಾಜದ ಅತ್ಯಂತ ಕಟ್ಟಕಡೆಯ ವ್ಯಕ್ತಿಯನ್ನು ಔನ್ನತ್ಯ ಮಟ್ಟಕ್ಕೆ ಕೊಂಡೊಯ್ದು ಸರ್ವೋದಯಕ್ಕೆ ಪ್ರತೀಕವಾಗಿ ಕಡೆದು ನಿಲ್ಲಿಸಿದ್ದಾರೆ. 'ಶೂದ್ರತಪಸ್ವಿ'

ನಾಟಕದ ಶುದ್ರನಾದ ಶಂಬೂಕ ತಪಸ್ಸು ಮಾಡಿದ್ದರಿಂದ ಧರ್ಮದೇವತೆ ಮುನಿದು, ತನ್ನ ಮಗನ ಮರಣ ಸಂಭವಿಸಿದೆ ಎಂಬುದು ಬ್ರಾಹ್ಮಣನ ನಿರ್ಣಯ. ಕೊನೆಗೆ ರಾಮ ಬ್ರಹ್ಮಾಸ್ತ್ರವನ್ನು ಶಂಬೂಕನ ಮೇಲೆ ಪ್ರಯೋಗಿಸುತ್ತಾನೆ. ಪ್ರಯೋಗದ ಮುನ್ನ 'ಅರಸಿಕೊಲ್ ಅರಗುಲಿಯನ್' ಎಂದು ಆಜ್ಞಾಪಿಸಿ ಬಿಡುತ್ತಾನೆ. ಶಂಬೂಕನ ಬಳಿಹೋದ ಬ್ರಾಹ್ಮಾಸ್ತ್ರ ತನ್ನ ಉಗ್ರತೆಯನ್ನಳಿದು, ವಿನೀತವಾಗಿ ತಪಸ್ವಿಗೆ ನಮಸ್ಕರಿಸುತ್ತದೆ. ಇಲ್ಲಿ ವಿದ್ಯೆ, ತಪಸ್ಸು, ಬುದ್ಧಿ ಯಾರ ಸ್ವತ್ತೂ ಅಲ್ಲ. ಅದು ಅವರ ಪ್ರತಿಭಾಶಕ್ತಿಯಿಂದ ಬಂದದ್ದು ಎಂದು ತಿಳಿಯುತ್ತದೆ. 'ಬೆರಳ್ ಕೊರಳ್' ನಾಟಕದಲ್ಲಿ ನಗರ ಸಂಸ್ಕೃತಿ ಮತ್ತು ದೇಸಿ ಸಂಸ್ಕೃತಿಯ ಮುಖಾಮುಖಿ ಪ್ರತಿಬಿಂಬಿತವಾಗಿದೆ. ಅರ್ಜುನ ಸಂಸ್ಕೃತಿ ಮತ್ತು ಏಕಲವ್ಯ ಸಂಸ್ಕೃತಿ ಎಂದು ಕರೆಯಬಹುದು. ಇಲ್ಲಿ ಏಕಲವ್ಯನ ಪ್ರತಿಭೆ, ಶಕ್ತಿ ಪ್ರಧಾನವಾಗಿ ಬಿತ್ತರವಾಗಿದೆ. ಅಕ್ಷರವಿದ್ಯೆ, ಬಿಲ್ವಿದ್ಯೆ ಇವು ಮೇಲ್ವರ್ಗದವರಿಗೆ ಮೀಸಲು ಎಂಬುವುದನ್ನು ಪ್ರಬಲವಾಗಿ ವಿರೋಧಿಸಿದ್ದಾರೆ.

ವಿವೇಕಾನಂದರು – ಭವ್ಯಭಾರತವನ್ನು ಕಟ್ಟಬೇಕಾದರೆ ನಮ್ಮ ದೇಶದ ಯುವಶಕ್ತಿ ಅತ್ಯಂತ ಪ್ರಮುಖವಾದದು ಎಂದು ಯುವಕರನ್ನು ಹುರಿದುಂಬಿಸಿದವರು. ಮನುಷ್ಯನ ಜೀವನ ಅಶಾಶ್ವತವಾದುದು. ಜಗತ್ತಿನ ಅಹಂಕಾರಗಳು ಕ್ಷಣಿಕವಾದವುಗಳು. ಯಾರು ಇತರಿಗಾಗಿ ಜೀವಿಸುತ್ತಾರೋ, ಅವರು ಮಾತ್ರ ಜೀವಂತವಾಗಿರುತ್ತಾರೆ. ಸ್ವಾರ್ಥಕ್ಕೋಸ್ಕರ ಬದುಕುವವರು ಜೀವಂತವಾಗಿರುವುದಕ್ಕಿಂತ ಹೆಚ್ಚಾಗಿ ಸತ್ತಂತೆಯೇ ಇರುತ್ತಾರೆ. ಈ ಜಗತ್ತಿನಲ್ಲಿ ಒಂದರೆಡು ದಿನಗಳ ಕಾಲ ಹೆಚ್ಚಿಗೆ ಬಾಳುವುದರಿಂದ ಏನು ತಾನೇ ಪ್ರಯೋಜನ? 'ತುಕ್ಕು ಹಿಡಿಯುವುದಕ್ಕಿಂತಲೂ, ಸವೆದು ಹೊಗುವುದು ಲೇಸಲ್ಲವೇ ?' ನಮ್ಮ ದೇಶದ ದಾರಿದ್ರ್ಯ ಮತ್ತು ಅಜ್ಞಾನಿಗಳ ಸುಳಿಯಲ್ಲಿ ಸಿಲುಕಿ ಮುಳುಗಿ ಹೋಗುತ್ತಿರುವ ಲಕ್ಷಾಂತರ ದೇಶ ಬಾಂಧವರ ಬಗ್ಗೆ ಮೂಲಭೂತ ಸೌಕರ್ಯವನ್ನು ಒದಗಿಸಿಕೊಡುವ ಉದ್ದೇಶದಿಂದ ಕೈಲಾದಷ್ಟು ದುಡಿಯುತ್ತಾರೆಯೋ – ಆಗ ಮಾತ್ರ ಭಾರತ ಮೇಲೆ ಬರುವುದಕ್ಕೆ ಸಾಧ್ಯವಾಗುತ್ತದೆ ಎಂದು ಸಂದೇಶ ನೀಡಿರುವುದು ದೇಶ ಭಕ್ತಿಯನ್ನು ಬಿತ್ತುವ ಕೈಂಕರ್ಯವಾಗಿದೆ.

ವಿವೇಕಾನಂದರು ನಮ್ಮ ದೇಶದ ಅನೇಕರಲ್ಲಿ ಪ್ರಭಾವ, ಪ್ರೇರಣೆ ಬೀರಿದ್ದಾರೆ. ಬಂಗಾಳದ ಬಾಗಾಜತಿನ್ ಎಂಬ ಒಬ್ಬ ಯುವಕ. ಈತ ಬಂಗಾಳದಲ್ಲಿ ಹುಲಿಯ ವಿರುದ್ಧ ಹೋರಾಡಿ ಹುಲಿಯನ್ನು ಕೊಂದು ಪ್ರಸಿದ್ಧನಾಗಿದ್ದನು. ಅನಂತರದಲ್ಲಿ ನಾನು ಸನ್ಯಾಸಿಯಾಗಬೇಕು ಏನಾದರೂ ಸಾಧನೆ ಮಾಡಬೇಕೆಂದು ವಿವೇಕಾನಂದರ ಬಳಿ ಬಂದ. ಆಗ ವಿವೇಕಾನಂದರು ನೋಡು ಭವತಾರಿಣಿ (ತಾಯಿ) ನಿನಗೆ ಬುದ್ಧಿಕೊಟ್ಟಿರುವುದು ತಪಸ್ಸು ಮಾಡುವುದಕ್ಕಲ್ಲ, ಭಾರತ ಮಾತೆಯ ಸೇವೆಗೆ. ಹೋಗು ಸ್ವಾತಂತ್ರ್ಯ ಹೋರಾಟ ಮಾಡು ಎಂದು ಪ್ರೇರೇಪಿಸಿದರು. ಅನಂತರ ಈತ ಕ್ರಾಂತಿಕಾರಿಯಾಗಿ ಬ್ರಿಟೀಷರಿಗೆ ಸಿಂಹಸ್ವಪ್ನವಾದನು. ಬ್ರಿಟೀಷರ ವಿರುದ್ಧದ ಹೋರಾಟದಲ್ಲಿ ಅವರ ಕುತಂತ್ರದಿಂದ ಗುಂಡೇಟಿಗೆ ಬಿಲಿಯಾದ. ಆತನ ಪರಾಕ್ರಮವನ್ನು ಮೆಚ್ಚಿ ಬ್ರಿಟೀಷ್ ಕಮಾಂಡರ್ ಶವದ ಮುಂದೆ ನಮಸ್ಕರಿಸುತ್ತಾನೆ. ಇಂತಹ ದುರ್ದೈವಿ ದೇಶದಲ್ಲಿ ನೀನೇಕೆ ಹುಟ್ಟಿದ್ದೀಯಾ ? ನಮ್ಮ ದೇಶದಲ್ಲಿ 'ಅಡ್ಮಿರಲ್ ನೆಲ್ಸನ್' ಪ್ಯಾರಿಸ್ ಸೈನ್ಯವನ್ನು ಸೋಲಿಸಿ ಬ್ರಿಟನ್ ಅನ್ನು ಉಳಿಸಿದನು. ಅದರ ಪ್ರತೀಕವಾಗಿ ಈಗ ಲಂಡನ್ ಚೌಕವೊಂದರಲ್ಲಿ ಆತನ ಆಳೆತ್ತರದ ಪ್ರತಿಮೆಯಿದೆ. ನಮ್ಮ ದೇಶದಲ್ಲೇನಾದರೂ ನಿನ್ನಂತಹ ವೀರ ಇದ್ದಿದ್ದರೆ ನೆಲ್ಸನ್ ಪಕ್ಕದಲ್ಲಿ ನಿನ್ನ ಪ್ರತಿಮೆಯನ್ನು ಸ್ಥಾಪಿಸುತ್ತಿದ್ದೆವು ಎಂದು ಆತನ ಪರಾಕ್ರಮವನ್ನು ಪ್ರಶಂಸಿಸಿರುವುದನ್ನು ತಿಳಿದರೆ, ಸ್ವತಂತ್ರ ಭಾರತಕ್ಕೋಸ್ಕರ ಯುವಕರನ್ನು ಹುರಿದುಂಬಿಸುವುದಕ್ಕೆ ಮಾಡಿದ ಪ್ರೋತ್ಸಾಹವನ್ನು ಗಮನಿಸಿದರೆ ವಿವೇಕಾನಂದರ ದೇಶಪ್ರೇಮದ ಶಕ್ತಿ ತಿಳಿಯುತ್ತದೆ.

ಪ್ರೀತಿ ಲತಾ ಒಡೇರಾ ಎಂಬ ಪದವೀಧರೆ 1930 ರ ದಶಕದಲ್ಲಿ ಹೆಣ್ಣುಮಕ್ಕಳ ಗುಂಪನ್ನು ಕಟ್ಟಿಕೊಂಡು ದೇಶದ ಸ್ವಾತಂತ್ರ್ಯಕ್ಕೋಸ್ಕರ ಡಾಕಾದಲ್ಲಿ ಬ್ರಿಟೀಷರ ವಿರುದ್ದ ಹೋರಾಡಿದ್ದಳು. ಅನಂತರ ಯುದ್ದದಲ್ಲಿ ಬ್ರಿಟೀಷರ ಗುಂಡೇಟಿಗೆ ಬಿಲಿಯಾದಳು. ಯುದ್ಧಕ್ಕೆ ಹೋಗಬೇಕಾದರೆ ಆಕೆ ಹಾಕಿದ್ದ ಕುರ್ತದ ಮೇಲೆ ವಿವೇಕಾನಂದರ ಭಾವಚಿತ್ರವನ್ನು ಹಾಕಿಕೊಂಡಿದ್ದಳು. ಹೀಗೆ ಲಿಂಗಭೇದವಿಲ್ಲದೇ ದೇಶಸೇವೆಗೋಸ್ಕರ ಮಾಡಿರುವ ತ್ಯಾಗ ಬಲಿದಾನ ಅವಿಸ್ಮರಣೀಯವಾದುದು.

1857 ರಲ್ಲಿ ರಾಬರ್ಟ್ ಕ್ಲೈವ್ ಬರೆದ ಷರಾ ಹೀಗಿದೆ : ಭಾರತೀಯ ಸಮಾಜ ಅತ್ಯಂತ ಅಧೋಗತಿಗೆ ಇಳಿದಿತ್ತು. ಜನ ಹೆದರುತ್ತಿದ್ದರು. ಯಾರು ಪರಸ್ಪರ ಜೊತೆಯಲ್ಲಿರಲಿಲ್ಲ, ಹಾಗಾಗಿ ಭಾರತದ ಬಹುತೇಕ ಭಾಗವನ್ನು ಗೆಲ್ಲುವುದಕ್ಕೆ ಸಾಧ್ಯವಾಯಿತು. ಪ್ಲಾಸಿಕದನದಲ್ಲಿ ನನ್ನ ಸೈನ್ಯ ಗೆದ್ದು ಕಲ್ಕತ್ತಾ ನಗರದಲ್ಲಿ ಹೋಗಬೇಕಾದರೆ ಜನರೆಲ್ಲ ಬಾಗಿಲು, ಕಿಟಕಿಗಳ ಹಿಂದೆನಿಂತು ಭಯದಿಂದ ನೋಡುತ್ತಿದ್ದರು ಆಗ ಅವರೆಲ್ಲ ಆಚೆ ಬಂದು ಥೂ ಅಂತ ಉಗಿದಿದ್ದರೆ ಅವರ ಎಂಜಲಿಗೆ ನಮ್ಮ ಸೈನ್ಯ ಸಮುದ್ರದಲ್ಲಿ ಮುಳಗಿ ಹೋಗುತ್ತಿತ್ತು ಎಂದಿದ್ದಾನೆ. ಎಲ್ಲಿಯವರೆಗೆ ಭಾರತ ಛಿದ್ರವಾಗಿರುತ್ತದೋ ಅಲ್ಲಿಯವರೆಗೆ ನಾವು ಆಳುತ್ತೇವೆ ಎಂದುಕೊಂಡಿದ್ದವರು ಬ್ರಿಟೀಷರು. ಇಂತಹ ದೇಶದ ಸಂದಿಗ್ಧ ವಾತಾವರಣವನ್ನು ಅರಿತಿದ್ದು ವಿವೇಕಾನಂದರು ಭಾರತವನ್ನು ಸಾಮಾಜಿಕವಾಗಿ ಒಗ್ಗೂಡಿಸಿ ಯುವಕರಲ್ಲಿ ದೇಶಪ್ರೇಮವನ್ನು ಬಿತ್ತಿದರು. 1921ರಲ್ಲಿ ಮಹಾತ್ಮ ಗಾಂಧೀಜಿಯವರು ಕಲ್ಕತ್ತಾದಲ್ಲಿ ನಡೆದ ಕಾಂಗ್ರೇಸ್ ಅಧಿವೇಶನದಲ್ಲಿ ಭಾಗವಹಿಸಿದ್ದರು. ಆ ಸಂದರ್ಭದಲ್ಲಿ ದಕ್ಷಿಣೇಶ್ವರದ ಬೇಲೂರಿಗೆ ಭೇಟಿ ನೀಡಿ ವಿವೇಕಾನಂದರ ಬಗ್ಗೆ ಬರೆದ ಪುಸ್ತಕವನ್ನು ಓದಿ ಮುಗಿಸಿದ ನಂತರ ಭಾರತದ ಬಗ್ಗೆ ಪ್ರೀತಿ, ಗೌರವ ಇನ್ನೂ ಸಾವಿರಪಟ್ಟು ಹೆಚ್ಚಾಯಿತು ಎಂದಿದ್ದಾರೆ.

"ಭರತಖಂಡದ ಬಡವರಲ್ಲಿ ಅನೇಕರು ಹೇಗೆ ಮಹಮದೀಯರಾಗಿರುವರು? ಬಲಪ್ರಯೋಗದಿಂದ ಅವರನ್ನು ಮುಸಲ್ಮಾನ ಮತಕ್ಕೆ ಸೇರಿಸಿದರು ಎನ್ನುವುದು ಶುದ್ಧ ತಪ್ಪು. ಜಮೀನ್‌ದಾರರ ಉಪಟಳದಿಂದ, ಪುರೋಹಿತರ ಹಿಂಸೆಯಿಂದ ತಪ್ಪಿಸಿಕೊಳ್ಳಬೇಕೆಂದು ಮುಸಲ್ಮಾನರಾದರು. ಆದ ಕಾರಣವೇ ಬಂಗಾಳ ದೇಶದ ರೈತರಲ್ಲಿ ಹಿಂದೂಗಳಿಗಿಂತ ಮುಸಲ್ಮಾನರೇ ಹೆಚ್ಚು. ಅಲ್ಲಿ ಹೆಚ್ಚು ಹಿಂದೂ ಜಮೀನ್ದಾರರು. ಅಧಃಪಾತಾಳಕ್ಕೆ ಹೋಗುವ ಕೋಟ್ಯನುಕೋಟಿ ಭಾರತೀಯರನ್ನು ಮೇಲೆತ್ತಬೇಕೆಂದು ಯಾರು ಬಯಸುವರು ? ಕೆಲವು ಸಾವಿರ ಪದವೀಧರರು, ಕೆಲವು ಶ್ರೀಮಂತರು, ಇವರಿಂದ ಅಲ್ಲ ಒಂದು ರಾಷ್ಟ್ರವಾಗುವುದು. ನಿಜ, ನಮಗೆ ಅಷ್ಟೊಂದು ಅವಕಾಶವಿಲ್ಲ. ಆದರೇನು ? ಮೂವತ್ತು ಕೋಟಿ ಜನರ ಊಟಕ್ಕೆ ಬಟ್ಟೆಗೆ ಬೇಕಾದಷ್ಟು ಇದೆ. ಅವರಿಗೆ ಹೆಚ್ಚು ಸೌಕರ್ಯವನ್ನು ಕೊಡಬಹುದು. ಹೆಚ್ಚು ಸುಖಿಗಳನ್ನಾಗಿ ಮಾಡಬಹುದು. ನಮ್ಮ ಜನರಲ್ಲಿ ಶೇಕಡ ತೊಂಬತ್ತರಷ್ಟು ಜನರಿಗೆ ವಿದ್ಯೆ ಇಲ್ಲ. ಇದನ್ನು ಯಾರು ಮನಸ್ಸಿಗೆ ಹಾಕಿಕೊಳ್ಳುತ್ತಾರೆ ? ಈ ಬಾಬುಗಳು, ದೇಶಭಕ್ತರು ಎಂದು ಜಂಬ ಕೊಚ್ಚಿಕೊಳ್ಳುವವರು, ಇದನ್ನು ಯೋಚಿಸುತ್ತಾರೇನು ?" (ಎಚ್ಚೆತ್ತಭಾರತ–ಶ್ರೀರಾಮಕೃಷ್ಣ ಆಶ್ರಮ ಮೈಸೂರು, ಪು.೧೨೭) ನಮ್ಮ ದೇಶದ ಜನರಿಗೆ ಬಹಳ ಮುಖ್ಯವಾಗಿ ಬೇಕಾಗಿರುವುದು ಶಿಕ್ಷಣ. ಪ್ರತಿಯೊಬ್ಬ ವ್ಯಕ್ತಿಯೂ ಶಿಕ್ಷಿತನಾದರೆ ದೇಶದ ಒಳಿತು ಕೆಡಕುಗಳನ್ನು, ಸಮಾಜದ ಅಂಕುಡೊಂಕುಗಳನ್ನು ಆಲೋಚಿಸುವ ಶಕ್ತಿ ಬರುತ್ತದೆ. ಹಿಂದಿನ ಶ್ರೇಣೀಕರಣ ವ್ಯವಸ್ಥೆಯ ಪರಿಣಾಮವಾಗಿ ಸಮಾಜದಲ್ಲಿ ಅಸಮತೋಲನವುಂಟಾಗಿ ಬಹುತೇಕ ಜನರು ಅನ್ನ, ಬಟ್ಟೆ,

ವಿದ್ಯೆಯಿಂದ ವಂಚಿತರಾಗಿದ್ದರು. ಭವ್ಯಭಾರತ ನಿರ್ಮಾಣವಾಗಬೇಕಾದರೆ ದೇಶದ ಜನರು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಮೇಲೆ ಬರಬೇಕು ಎಂದು ವಿವೇಕಾನಂದರು ತಮ್ಮ ದಿವ್ಯನುಡಿಗಳ ಮೂಲಕ ದೇಶದ ಜನರಲ್ಲಿ ಸ್ಪೂರ್ತಿ ನೀಡಿದ್ದರು.

ಸ್ತ್ರೀಯರ ಅಭ್ಯುದಯಕ್ಕಾಗಿ ಸ್ವಾಮೀಜಿ ಕರೆಕೊಟ್ಟಿದ್ದಾರೆ. ಭರತಖಂಡದಲ್ಲಿ ಆದರ್ಶ ಮಹಿಳೆ ತಾಯಿ. ಮಹಿಳೆ ಮೊದಲ ತಾಯಿ, ಅನಂತರವೂ ತಾಯಿಯೇ. ದೇವರಿಗೆ ಸಮಾನಳು ಅತ್ಯಮೂಲ್ಯ ನಿಸ್ವಾರ್ಥದ ಸಹಿಷ್ಣುತೆಯ ಮೂರ್ತಿ ಕ್ಷಮಾಮಯಿ ತಾಯಿ. ಭಾರತದಲ್ಲಿ ತಾಯಿಯೇ ಕುಟುಂಬದ ಕೇಂದ್ರ ಹಾಗೂ ನಮ್ಮ ಅತ್ಯುನ್ನತ ಆದರ್ಶವಾಗಿದ್ದಾಳೆ. ಪುರಾತನ ಕಾಲದಲ್ಲಿ ಸ್ತ್ರೀಯರು ಪುರುಷರಷ್ಟೇ ಹಕ್ಕನ್ನು ಪಡೆದಿದ್ದರೆಂಬುದನ್ನು ಆರ್ಯರ ಸಾಹಿತ್ಯದಲ್ಲಿ ಓದುತ್ತೇವೆ. ಪ್ರಪಂಚದ ಇನ್ನಾವ ಸಾಹಿತ್ಯದಲ್ಲಿಯೂ ನಮಗಿದು ಕಂಡುಬರುವುದಿಲ್ಲ. ಆದರೆ ಸ್ತ್ರೀಯರನ್ನು ಕಠಿಣವಾದ ನಿಯಮಗಳಿಂದ ಅವರನ್ನು ಬಂಧನಕ್ಕೀಡು ಮಾಡುವುದು, ಅವರು ಕೇವಲ ಮಕ್ಕಳನ್ನು ಹೆರುವ ಯಂತ್ರವನ್ನಾಗಿ ಮಾಡುವುದು, ಕಂಡುಬಂದರೆ ಸಮಾಜವು ಮುಂದುವರಿಯಲು ಸಾಧ್ಯವಾಗುವುದಿಲ್ಲ. 'ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ'– ಎಲ್ಲಿ ಸ್ತ್ರೀಯರು ಪೂಜಿಸಲ್ಪಡುವರೋ ಅಲ್ಲಿ ದೇವತೆಗಳು ತೃಪ್ತರಾಗಿರುವರು ಎಂದು ಮನು ಹೇಳಿರುವನು. ಗಂಡು ಮಕ್ಕಳಂತೆಯೇ ಹೆಣ್ಣುಮಕ್ಕಳನ್ನು ಸಂರಕ್ಷಿಸಿ ವಿದ್ಯಾವಂತೆಯರನ್ನಾಗಿ ಮಾಡಬೇಕು. ಸ್ತ್ರೀಯರ ಬುದ್ಧಿ ಬೆಳವಣಿಗೆಗೆ ಅವಕಾಶ ಕೊಟ್ಟರೆ ಭಾರತದ ಭವಿಷ್ಯನಾರಿಯು ಇಡೀ ವಿಶ್ವಕ್ಕೆ ಆದರ್ಶವಾಗುವಳು. ಎಷ್ಟೋ ದಾರುಣ ಸಮಸ್ಯೆಗಳನ್ನು ವಿದ್ಯಾಭ್ಯಾಸ ಮಂತ್ರದಿಂದ ಬಗೆಹರಿಸಬಹುದು. ಸೀತೆ, ಸಾವಿತ್ರಿ, ದಮಯಂತಿ, ಲೀಲಾವತಿ, ಖನಾ, ಮೀರಾ– ಇವರ ಜೀವನ ಚರಿತ್ರೆಗಳನ್ನು ಹೆಂಗರಿಸರಿಗೆ ತಿಳಿಯಪಡಿಸಿ ಅವರ ಜೀವನಕ್ಕೆ ಮಾರ್ಗದರ್ಶಕವಾಗುವಂತೆ ಮಾಡಬೇಕು. ಧರ್ಮ, ಶಿಲ್ಪ, ವಿಜ್ಞಾನ, ಗೃಹಕೃತ್ಯ, ಅಡುಗೆ, ಹೊಲಿಗೆ, ಶರೀರಪಾಲನೆ– ಈ ವಿಷಯಗಳನ್ನು ಸ್ತ್ರೀಯರಿಗೆ ಹೇಳಿಕೊಡುವುದು ಒಳ್ಳೆಯದು. ಇತರೆ ವಿಷಯಗಳ ಜೊತೆಗೆ ಅವರು ಪರಾಕ್ರಮ ಮತ್ತು ಶೌರ್ಯವನ್ನು ಕಲಿಯಬೇಕು. ಈ ವರ್ತಮಾನದ ಕಾಲದಲ್ಲಿ ಅವರು ಆತ್ಮರಕ್ಷಣೆಯ ಪಾಠವನ್ನೂ ಕಲಿಯುವುದು ಅತ್ಯಾವಶ್ಯಕವಾಗಿದೆ. ಝಾನ್ಸಿರಾಣಿಯು ಒಂದು ಹೊಸ ಆದರ್ಶವೆಂದಿದ್ದಾರೆ. ಈ ಹಿನ್ನೆಲೆಯಲ್ಲಿ ವಿವೇಕಾನಂದರು 'ಮೊದಲು ನಿಮ್ಮ ಸ್ತ್ರೀಯರನ್ನೂ ವಿದ್ಯಾವಂತರನ್ನಾಗಿ ಮಾಡಿ, ಅವರಿಗೆ ಸ್ವಾತಂತ್ರ್ಯವನ್ನು ಕೊಡಿ. ಅನಂತರ ಯಾವ ಸುಧಾರಣೆ ತಮಗೆ ಅವಶ್ಯಕ ಎಂಬುದನ್ನು ಅವರೇ ಹೇಳುವರು. ಹೆಣ್ಣುಮಕ್ಕಳಿಗೆ ಶಿಕ್ಷಣಕೊಟ್ಟರೆ ಎರಡು ಮನೆ ಬೆಳಗುತ್ತದೆ. ಒಂದು ತವರು ಮನೆ ಮತ್ತೊಂದು ಗಂಡನ ಮನೆ ಎಂದು ಸ್ತ್ರೀಪರವಾದ ಚಿಂತನೆಯನ್ನು ವ್ಯಕ್ತಪಡಿಸಿದ್ದಾರೆ.

ಸ್ವಾಮಿ ವಿವೇಕಾನಂದ ಮತ್ತು ಕುವೆಂಪು– ಇವರಿಬ್ಬರೂ ಆಧ್ಯಾತ್ಮಿಕ ಹಾಗೂ ಸಾಹಿತ್ಯಿಕ ನೆಲೆಗಟ್ಟಿನಲ್ಲಿ ವಿಶ್ವಸಮಾಜಕ್ಕೆ ಸಂದೇಶವನ್ನು ಸಾರಿದ ಮಹಾಪುರುಷರು. ವಿಶ್ವದ ಅನೇಕ ದೇಶಗಳಲ್ಲಿ ವಿವೇಕಾನಂದರ ವಿಚಾರಧಾರೆಗಳು ಇವತ್ತಿಗೂ ಚಲನಶೀಲವಾಗಿದ್ದು, ಇವರ ಜಯಂತಿಯನ್ನು ಅತ್ಯಂತ ಪ್ರೀತಿ, ಗೌರವದಿಂದ ಆಚರಿಸುತ್ತಿರುವುದನ್ನು ಕಾಣುತ್ತಿದ್ದೇವೆ. ಇವರ ಕಡಿಮೆ ಅವಧಿಯ ವಯೋಮಾನದಲ್ಲಿ ಮಾಡಿದ ಸಾಧನೆ ಅವಿಸ್ಮರಣೀಯವಾದುದು. ಆಧುನಿಕ ಭಾರತದ ಇತಿಹಾಸದಲ್ಲಿಯೇ, ಬಡವರು, ದೀನ, ದಲಿತರ ಬಗ್ಗೆ ಹಾಗೂ ಅವರಿಗೋಸ್ಕರ ವಿವಿಧ ಬಗೆಗಳಲ್ಲಿ, ದೇಶ–ವಿದೇಶಗಳಲ್ಲಿ ನಿರಂತರವಾಗಿ ಸಂಚಾರ ಮಾಡಿ ನಿಸ್ವಾರ್ಥ ಸೇವೆಯನ್ನು ಕೈಗೊಳ್ಳುವ ವಿಷಯದಲ್ಲಿ ದನಿಯೆತ್ತಿದ ಶ್ರೇಷ್ಠ ಆಧ್ಯಾತ್ಮಿಕ ಚಿಂತಕ ವಿವೇಕಾನಂದರು ಅಗ್ರಗಣ್ಯರು. ಹಾಗೆಯೇ ಇಪ್ಪತ್ತನೆಯ ಶತಮಾನ ಕಂಡ ಮಹಾಕವಿ ಕುವೆಂಪು ಅವರ ವಿಚಾರಧಾರೆಗಳು ಸಾರ್ವಕಾಲಿಕವಾದವುಗಳು. ಅವರ ವೈಚಾರಿಕ, ವೈಜ್ಞಾನಿಕ ಬರಹಗಳು ಜಗತ್ತಿನ ವಿವಿಧ ಭಾಷೆಗಳಿಗೆ ಅನುವಾದವಾಗಬೇಕಾಗಿದೆ. ಆಗ ಕುವೆಂಪು ಅವರ ಸಾಹಿತ್ಯ ಏನೆಂಬುದು ತಿಳಿಯುತ್ತದೆ. 1950 ಜನವರಿ 26 ರಂದು ಭಾರತವು ಗಣರಾಜ್ಯವನ್ನು ಘೋಷಿಸಿಕೊಂಡಾಗ 'ಶ್ರೀಸಾಮಾನ್ಯರ ದೀಕ್ಷಾಗೀತೆ'ಯನ್ನು ಬರೆದರು. 20ನೇ ಶತಮಾನ ಸಾಮಾನ್ಯನ ಯುಗವೆಂಬುದು ಘೋಷವಾಕ್ಯ. ಸಾಮಾನ್ಯವೆಂಬುದು ಅಸಹಾಯಕ, ದುರ್ಬಲ, ಅನುಕಂಪ, ರಕ್ಷಣೆಗಳಿಗೆ ಅರ್ಹವೆಂಬುದು ಸಾಮಾನ್ಯರ ತಿಳುವಳಿಕೆಯೆಂದು, ಆತ ಕೇವಲ ಸಾಮಾನ್ಯನಲ್ಲ 'ಶ್ರೀಸಾಮಾನ್ಯ' ಎಂದು ಭಗವಂತನ ಸ್ಥಾನದಲ್ಲಿ ಕಡೆದು ನಿಲ್ಲಿಸಿದ್ದಾರೆ. ಸಂವಿಧಾನದ ಹಕ್ಕು ಬಾಧ್ಯತೆಗಳು ಸರ್ವೋದಯದ ದೃಷ್ಟಿಯಲ್ಲಿ ಶ್ರೀಸಾಮಾನ್ಯನಿಗೆ ಮುಟ್ಟಬೇಕೆಂದು ಘೋಷಿಸಿದ್ದಾರೆ. ವಿವೇಕಾನಂದರು ಮತ್ತು ಕುವೆಂಪು ಅವರ ಸಾಮಾಜಿಕ ದೃಷ್ಟಿಕೋನದ ಸಮೀಕರಣ ಒಂದೇ ಆಗಿತ್ತು ಎಂಬುದನ್ನು ಅವರವರ ವಿಚಾರಧಾರೆಗಳ ಮೂಲಕ ಗಮನಿಸಬಹುದು. ಇವರಿಬ್ಬರ ವಿಚಾರಧಾರೆಗಳು ವಿಶ್ವಸಮಾಜದ ಏಳಿಗೆಗೆ ಸಾರ್ವಕಾಲಿಕವಾಗಿ ಮಾರ್ಗದರ್ಶಕವಾಗಿವೆ.

**ಪರಾಮರ್ಶನ ಗ್ರಂಥಗಳು :**


1. ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ (ಸಮಗ್ರ ಸಂಪುಟಗಳು), ಶ್ರೀರಾಮಕೃಷ್ಣಾಶ್ರಮ, ಮೈಸೂರು–570020.
2. ಎಚ್ಚೆತ್ತ ಭಾರತ, 2012, ಸ್ವಾಮಿ ವಿವೇಕಾನಂದ, ಶ್ರೀರಾಮಕೃಷ್ಣಾಶ್ರಮ, ಯಾದವಗಿರಿ, ಮೈಸೂರು–570020.
3. ಭವ್ಯ ವ್ಯಕ್ತಿತ್ವ–ದಿವ್ಯಸಂದೇಶ (ಸ್ವಾಮಿ ವಿವೇಕಾನಂದರ ಜೀವನ–ಸಂದೇಶ), ಅನುವಾದಕರು : ಸ್ವಾಮಿ ವೀರೇಶಾನಂದ, ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್, ಬೇಲೂರು ಮಠ, ಹೌರಾ ಜಿಲ್ಲೆ, ಪಶ್ಚಿಮ ಬಂಗಾಳ–711202.
4. ಗಂಗೋತ್ರಿ (ಅಭಿನಂದನಾ ಗ್ರಂಥ), 1968, ಸಂ.ದೇಜಗೌ, ಕುವೆಂಪು ಅಭಿನಂದನಾ ಸಮಿತಿ, ಗೀತಾಬುಕ್‌ಹೌಸ್ ಮೈಸೂರು–01
5. ಸಹ್ಯಾದ್ರಿ (ಅಭಿನಂದನಾ ಗ್ರಂಥ), 1975, ಪ್ರ.ಸಂ.ದೇಜಗೌ, ಸಂ.ಜೀಶಂಪ, ಸಿಪಿಕೆ, ಪ್ರಕಾಶಕರು : ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಮೈಸೂರು–12
6. ಕುವೆಂಪು ಸಾಹಿತ್ಯ : ಕೆಲವು ಮುಖಗಳು, 1974, ಸಿ.ಪಿ.ಕೆ, ಪ್ರಬುದ್ಧ ಪ್ರಕಾಶನ, ಮೈಸೂರು.
7. ಕುವೆಂಪು ಅವರ ವೈಚಾರಿಕತೆ, 1993, ಡಾ.ಎಚ್.ತಿಪ್ಪೇರುದ್ರಸ್ವಾಮಿ, ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ.ಮೈ–570006.
8. ಕುವೆಂಪು ನಾಟಕಗಳ ಅಧ್ಯಯನ, 2002, ನರಹಳ್ಳಿ ಬಾಲಸುಬ್ರಹ್ಮಣ್ಯ, ಪ್ರಕಾಶಕರು : ಅಂಕಿತ ಪುಸ್ತಕ, ಬಸವನಗುಡಿ, ಬೆಂಗಳೂರು–560004
9. ಕುವೆಂಪು ಕಾವ್ಯ ಸಂಸ್ಕೃತಿ ಚರಿತ್ರೆಯ ರೂಪಕ, 2004, ನರಹಳ್ಳಿ ಬಾಲಸುಬ್ರಹ್ಮಣ್ಯ, ಪ್ರಕಾಶಕರು. ಅಂಕಿತ ಪುಸ್ತಕ, ಬಸವನಗುಡಿ, ಬೆಂಗಳೂರು–560004.
10. ಶ್ರೀರಾಮಾಯಣ ದರ್ಶನಂ ಮಹಾಕಾವ್ಯ ಸಮೀಕ್ಷೆ, 2010, ಕೋ.ಚೆನ್ನಬಸಪ್ಪ, ಪ್ರಸಾರಾಂಗ, ಮೈ.ವಿ.ವಿ.ಮೈ.2010.
11. ಕುವೆಂಪು ಸಮಗ್ರ ಕಾವ್ಯ ಸಂಪುಟ–1 ಮತ್ತು 2, 2017, ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ (ರಿ), ಕುಪ್ಪಳಿ. 577415
12. ಕುವೆಂಪು ಸಮಗ್ರ ನಾಟಕ, 2017, ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ (ರಿ), ಕುಪ್ಪಳಿ. 577415